ಕುಶಾಲನಗರ ಯೋಜನಾ ಪ್ರಾಧಿಕಾರ, ಕುಶಾಲನಗರ

ಕಾವೇರಿ ಬಡಾವಣೆ, ಸಂ.05, ಬ್ಲಾಕ್ ನಂ.01, ಕುಶಾಲನಗರ – 571 234

Email Id: kushalnagaradtp@hotmail.com **ದೂರವಾಣಿ ಸಂ: 08276–274040**

ಕುಶಾಲನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಡಾ॥ ಯತೀಶ್ ಉಳ್ಳಾಲ್ ಉಪವಿಭಾಗಾಧಿಕಾರಿಗಳು, ಮಡಿಕೇರಿ ಉಪವಿಭಾಗ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 13–12–2023 ರ ಬುಧವಾರದಂದು ಅಪರಾಹ್ನ 2.30 ಗಂಟೆಗೆ ನಡೆದ ಪ್ರಾಧಿಕಾರದ 59 ನೇ ಸಾಮಾನ್ಯ ಸಭೆಯ ನಡಾವಳಿ

ಸಭೆಯಲ್ಲಿ ಹಾಜರಿದ್ದವರು :–

1. ಅಧ್ಯಕ್ಷರು
2. ಸದಸ್ಯ ಕಾರ್ಯದರ್ಶಿ, ಕುಶಾಲನಗರ ಯೋಜನಾ ಪ್ರಾಧಿಕಾರ
3. ಮುಖ್ಯಾಧಿಕಾರಿಗಳು, ಪುರಸಭೆ, ಕುಶಾಲನಗರ
4. ಶ್ರೀ ಅಮೃತ್‌ರಾಜ್, ಸ್ಥಳೀಯ ಸಂಸ್ಥೆ ನಾಮನಿರ್ದೇಶಿತ ಸದಸ್ಯರು

ವಿಷಯ ಸಂಖ್ಯೆ(01): ದಿನಾಂಕ: 26–09–2023 ರಂದು ನಡೆದ ಪ್ರಾಧಿಕಾರದ 58ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಸ್ಥಿರೀಕರಿಸುವ ಬಗ್ಗೆ.

(i) ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 86/4 ರಲ್ಲಿ 0.79 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಪುರುಷೋತ್ತಮ್ ರೈ**).

ಟಿಪ್ಪಣಿ: ಸದರಿ ಪ್ರಸ್ತಾವನೆಯನ್ನು ದಿನಾಂಕ:26–09–2023 ರಂದು ನಡೆದ ಪ್ರಾಧಿಕಾರದ 58ನೇ ಸಭೆಯಲ್ಲಿ ವಿಷಯ ಸಂಖ್ಯೆ 07(ಅ) ರಲ್ಲಿ ಮಂಡಿಸಿದ್ದು, ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು, ದೃಢೀಕರಿಸಿರುವ ಸರ್ವೆ ನಕ್ಷೆ, ಗ್ರಾಮ ನಕ್ಷೆಯನ್ನು ಸಲ್ಲಿಸಿದ ನಂತರ ಸ್ಥಳಪರಿಶೀಲನೆ ನಡೆಸಿದ ನಂತರ ಅಗತ್ಯ ಕ್ರಮ ಕೈಗೊಳ್ಳಬಹುದೆಂದು ಸಭೆಯಲ್ಲಿ ನಿರ್ಣಯಿಸಲಾಗಿತ್ತು. ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 438489 ದಿನಾಂಕ:13–07–2023 ರಂದು ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಅರ್ಜಿದಾರರು ಸಲ್ಲಿಸಿರುವ ಅಫಿಡೆವಿಟ್ ಸಂಖ್ಯೆ: IN-KA19648746634640V ದಿನಾಂಕ:19–10–2023 ರಂತೆ ಸದರಿ ಜಮೀನಿನ ಮುಂಭಾಗದಲ್ಲಿರುವ ಸ.ನಂ. 93/3 ರ ಜಮೀನಿನಿಂದ ಸದರಿ ಜಮೀನಿಗೆ ರಸ್ತೆ ಸಂಪರ್ಕ ಕಲ್ಪಿಸುವ ಹಾಗೂ ಸದರಿ ಎರಡು ಸರ್ವೆ ನಂಬರ್‌ಗಳ ಜಾಗವನ್ನು ಜಂಟಿಯಾಗಿ ಅಭಿವೃದ್ಧಿಪಡಿಸುವ ಷರತ್ತಿಗೊಳಪಟ್ಟಿದೆ. ಸ.ನಂ. 86/1ರ 11ಎ ನಕಾಶೆ ಯಂತೆ 14.75 ಸೆಂಟು ವಿಸ್ತೀರ್ಣ ಜಾಗ ಉದ್ದಗಲಗಳಲ್ಲಿ 30 ಅಡಿ ಅಗಲ, 214 ಅಡಿ ಉದ್ದದ ವಿಸ್ತೀರ್ಣ ಜಾಗವನ್ನು ರಸ್ತೆಗಾಗಿ ದಾನಮಾಡಲಾಗಿದೆ. ಸದರಿ ಜಮೀನಿನ ಪೂರ್ವ ದಿಕ್ಕಿನಲ್ಲಿ ಸಂಪರ್ಕ ಕಲ್ಪಿಸುವ ಹಾಲಿ 9.0ಮೀ ಅಗಲದ ಸಾರ್ವಜನಿಕ ರಸ್ತೆಯನ್ನು 12.00ಮೀ ಅಗಲಕ್ಕೆ ವಿಸ್ತರಿಸಲು ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾವಿಸಲಾಗಿದೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಇತ್ತೀಚಿನ ಆರ್.ಟಿ.ಸಿ, ಮ್ಯುಟೇಷನ್ ಪ್ರತಿ, ರಸ್ತೆ

ದೃಢೀರಣ ಪತ್ರ, ರಸ್ತೆ ಹಸ್ತಾಂತರಿಸಿರುವ ಪರಿತ್ಯಾಜನಾ ಪತ್ರ, ಆಕಾರ್ ಬಂದ್(ಉತಾರು ನಕ್ಷೆ), ಇತ್ತೀಚಿನ ಇ.ಸಿ. ಪ್ರತಿ, ಕ್ರಯಪತ್ರ, ಗ್ರಾಮ ನಕ್ಷೆ, ಅಫಿಡೆವಿಟ್ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ಏಕ–ನಿವೇಶನ ನಕ್ಷೆ ಅನುಮೋದನೆ: ಪ್ರಶ್ನಿತ ಜಮೀನಿನ ಸ್ಥಳಪರಿಶೀಲನೆ ನಡೆಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ಸಹಿ ಮಾಡಿ ನೀಡಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಉಪಯೋಗಕ್ಕಾಗಿ 3100.63 ಚ.ಮೀ (ಶೇ. 97.15%) ಮತ್ತು ರಸ್ತೆ ವಿಸ್ತರಣೆಗಾಗಿ 90.00 ಚ.ಮೀ (ಶೇ. 2.85%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಮಾದಾಪಟ್ಟಣ ಗ್ರಾಮದ ಸ.ನಂ. 86/4 ರಲ್ಲಿ 0.79 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ: 05–12–2023 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

(ii) ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 93/3 ರಲ್ಲಿ 0.62 ಎಕರೆ ವಿಸ್ತೀರ್ಣದ ಜಮೀನಿನ ವಾಣಿಜ್ಯ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಪುರುಷೋತ್ತಮ್ ರೈ**).

ಟಿಪ್ಪಣಿ: ಸದರಿ ಪ್ರಸ್ತಾವನೆಯನ್ನು ದಿನಾಂಕ:26–09–2023 ರಂದು ನಡೆದ ಪ್ರಾಧಿಕಾರದ 58ನೇ ಸಭೆಯಲ್ಲಿ ವಿಷಯ ಸಂಖ್ಯೆ 07(ಆ) ರಲ್ಲಿ ಮಂಡಿಸಿದ್ದು, ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು, ದೃಢೀಕರಿಸಿರುವ ಸರ್ವೆ ನಕ್ಷೆ, ಗ್ರಾಮ ನಕ್ಷೆಯನ್ನು ಸಲ್ಲಿಸಿದ ನಂತರ ಸ್ಥಳಪರಿಶೀಲನೆ ನಡೆಸಿದ ನಂತರ ಅಗತ್ಯ ಕ್ರಮ ಕೈಗೊಳ್ಳಬಹುದೆಂದು ಸಭೆಯಲ್ಲಿ ನಿರ್ಣಯಿಸಲಾಗಿತ್ತು. ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 398119 ದಿನಾಂಕ: 21–01–2023 ರಂದು ವಾಣಿಜ್ಯ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಾಣಿಜ್ಯ ವಲಯದಲ್ಲಿದೆ.

ರಸ್ತೆ ಸಂಪರ್ಕ: ಅರ್ಜಿದಾರರು ಸಲ್ಲಿಸಿರುವ ಅಫಿಡೆವಿಟ್ ಸಂಖ್ಯೆ: IN-KA19648746634640V ದಿನಾಂಕ: 19–10–2023 ರಂತೆ ಸದರಿ ಜಮೀನಿನ ಹಿಂಭಾಗದಲ್ಲಿರುವ ಸ.ನಂ. 86/4 ರ 0.79 ಎಕರೆ ಜಮೀನಿಗೆ ಸದರಿ ಜಮೀನಿನ ಮೂಲಕ ರಸ್ತೆ ಸಂಪರ್ಕ ಕಲ್ಪಿಸುವ ಹಾಗೂ ಸದರಿ ಎರಡು ಸರ್ವೆ ನಂಬರ್‌ಗಳ ಜಾಗವನ್ನು ಜಂಟಿಯಾಗಿ ಅಭಿವೃದ್ಧಿಪಡಿಸುವ ಷರತ್ತಿಗೊಳಪಟ್ಟಿದೆ. ಸ.ನಂ. 86/1ರ 11ಎ ನಕಾಶೆ ಯಂತೆ 14.75 ಸೆಂಟು ವಿಸ್ತೀರ್ಣ ಜಾಗ ಉದ್ದಗಲಗಳಲ್ಲಿ 30 ಅಡಿ ಅಗಲ, 214 ಅಡಿ ಉದ್ದದ ವಿಸ್ತೀರ್ಣ ಜಾಗವನ್ನು ರಸ್ತೆಗಾಗಿ ದಾನಮಾಡಲಾಗಿದೆ. ಪ್ರಸ್ತಾವಿತ ಜಮೀನು ದಕ್ಷಿಣ ದಿಕ್ಕಿನಲ್ಲಿ ರಾಷ್ಟ್ರೀಯ ಹೆದ್ದಾರಿ–275 ಗೆ ಲಗತ್ತಾಗಿದ್ದು, ಮಹಾಯೋಜನೆಯಂತೆ 30.0ಮೀ ಅಗಲಕ್ಕೆ ವಿಸ್ತರಿಸಲು ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾವಿಸಲಾಗಿದೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರಿಂದ ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಇತ್ತೀಚಿನ ಆರ್.ಟಿ.ಸಿ, ಮ್ಯುಟೇಷನ್ ಪ್ರತಿ, ಆಕಾರ್ ಬಂದ್(ಉತಾರು ನಕ್ಷೆ), ಇತ್ತೀಚಿನ ಇ.ಸಿ. ಪ್ರತಿ, ಕ್ರಯಪತ್ರ, ಗ್ರಾಮ ನಕ್ಷೆ, ಅಫಿಡೆವಿಟ್ ದಾಖಲಾತಿಗಳನ್ನು ಪಡೆಯಲಾಗಿದೆ.

ಏಕ–ನಿವೇಶನ ನಕ್ಷೆ ಅನುಮೋದನೆ: ಪ್ರಶ್ನಿತ ಜಮೀನಿನ ಸ್ಥಳಪರಿಶೀಲನೆ ನಡೆಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ಸಹಿ ಮಾಡಿ ನೀಡಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ

ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಾಣಿಜ್ಯ ಉಪಯೋಗಕ್ಕಾಗಿ 2134.35 ಚ.ಮೀ (ಶೇ. 85.00%), ವಾಹನ ನಿಲುಗಡೆಗಾಗಿ 125.55 ಚ.ಮೀ (ಶೇ. 5.00%) ಮತ್ತು ಉದ್ಯಾನವನಕ್ಕಾಗಿ 251.10 ಚ.ಮೀ (ಶೇ. 10.00%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಮಾದಾಪಟ್ಟಣ ಗ್ರಾಮದ ಸ.ನಂ. 93/3 ರಲ್ಲಿ 0.62 ಎಕರೆ ವಿಸ್ತೀರ್ಣದ ಜಮೀನಿನ ವಾಣಿಜ್ಯ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ: 05–12–2023 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ನಿರ್ಣಯ: ಸದರಿ ಪ್ರಸ್ತಾವನೆಗಳಿಗೆ ತಾಂತ್ರಿಕ ಅನುಮೋದನೆ ನೀಡಿರುವುದನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು ಹಾಗೂ ಇನ್ನುಳಿದ ನಡವಳಿಗಳನ್ನು ಓದಿ, ಒಪ್ಪಿ ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ:(02): ಪ್ರಾಧಿಕಾರದ ಖಾತೆಗೆ ಸಪ್ಟೆಂಬರ್ 2023, ಅಕ್ಟೋಬರ್ 2023 ಮತ್ತು ನವೆಂಬರ್ 2023 ರ ಮಾಹೆಯ ಜಮಾ ಮತ್ತು ಖರ್ಚುಗಳ ವಿವರಗಳನ್ನು ಪ್ರಾಧಿಕಾರದ ಸಭೆಗೆ ಮಂಡಿಸುವ ಬಗ್ಗೆ.

ಟಿಪ್ಪಣಿ: ಸಪ್ಟೆಂಬರ್ 2023, ಅಕ್ಟೋಬರ್ 2023 ಮತ್ತು ನವೆಂಬರ್ 2023 ರ ಮಾಹೆಯ ಜಮಾ ಮತ್ತು ಖರ್ಚುಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.

ಕ್ರ.. ಸಂ.	ಖಾತೆಯ ವಿವರ	ಪ್ರಾರಂಭಿಕ ಶಿಲ್ಕು ರೂ.ಗಳಲ್ಲಿ	ಮಾಹೆಯ ಜಮಾ. ರೂ.ಗಳಲ್ಲಿ	ಒಟ್ಟು	ಮಾಹೆಯ ಖರ್ಚು. ರೂ.ಗಳಲ್ಲಿ	ಉಳಿಕೆ ಶಿಲ್ಕು ರೂ.ಗಳಲ್ಲಿ
1	2	3	4	5	6	7
ಸಪ್ಟೆಂಬರ್–2023						
1	ಉಳಿತಾಯ ಶುಲ್ಕದ ಖಾತೆ	35,25,845=50	3,38,842=00	38,64,687=50	6,19,468=00	32,45,219=50
2	ಕೆರೆ ಅಭಿವೃದ್ಧಿ ಶುಲ್ಕದ ಖಾತೆ	2,98,215=00	64,336=00	3,62,551=00	–	3,62,551=00
3	ಸೆಸ್ ಶುಲ್ಕದ ಖಾತೆ	2,12,150=00	37,153=00	2,49,303=00	118=00	2,49,185=00
ಒಟ್ಟು		40,36210=50	4,40,331=00	44,76,541=50	6,19,586=00	38,56,955=50
	ಅಕ್ಟೋಬರ್–2023					
1	ಉಳಿತಾಯ ಶುಲ್ಕದ ಖಾತೆ	3245219=50	1,34,250=00	33,79,469=00	1,66,590=00	32,12,879=50
2	ಕೆರೆ ಅಭಿವೃದ್ಧಿ ಶುಲ್ಕದ ಖಾತೆ	362551=00	20,880=00	3,83,431=00	–	3,83,431=00
3	ಸೆಸ್ ಶುಲ್ಕದ ಖಾತೆ	2,49,185=00	15,110=00	2,64,295=00	–	2,64,295=00
ಒಟ್ಟು		38,56,955=50	1,70,240=00	40,27,195=50	1,66,590=00	38,60,605=50
ನವೆಂಬರ್–2023						
1	ಉಳಿತಾಯ ಶುಲ್ಕದ ಖಾತೆ	32,12,879=50	39,590=00	32,52,469.50	2,82,826=50	29,69,643=00
2	ಕೆರೆ ಅಭಿವೃದ್ಧಿ	3,83,431=00	––	3,83,431=00	––	3,83,431=00

	ಶುಲ್ಕದ ಖಾತೆ					
3	ಸೆಸ್ ಶುಲ್ಕದ ಖಾತೆ	2,64,295=00	700=00	2,64,995=00	––	2,64,995=00
ಒಟ್ಟು		38,60,605=50	40,290=00	39,00,895=50	2,82,826=50	36,18,069=00

ನಿರ್ಣಯ: ಸಪ್ಟೆಂಬರ್ 2023, ಅಕ್ಟೋಬರ್ 2023 ಮತ್ತು ನವೆಂಬರ್ 2023 ರ ಮಾಹೆಗಳ ಜಮಾ ಮತ್ತು ಖರ್ಚುಗಳನ್ನು ಸಭೆಯಲ್ಲಿ ಚರ್ಚಿಸಿ, ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

ವಿಷಯಸಂಖ್ಯೆ:(03): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 43/1 ರಲ್ಲಿನ 2.00 ಎಕರೆ, ಸ.ನಂ. 42/2 ರಲ್ಲಿ 3.50 ಎಕರೆ ಒಟ್ಟು 5.50 ಎಕರೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿರುವ ಬಗ್ಗೆ ಹಾಗೂ ನಿವೇಶನಗಳನ್ನು ಬಿಡುಗಡೆಗೊಳಿಸಿರುವ ಬಗ್ಗೆ ದೂರು ಅರ್ಜಿ ನೀಡಿರುವ ಕುರಿತು. (**ಅರ್ಜಿದಾರರು: ಶ್ರೀ ಆರ್.ಎಸ್. ದೊಡ್ಡಣ್ಣ**).

ಟಿಪ್ಪಣಿ: ಶ್ರೀ ಆರ್.ಎಸ್. ದೊಡ್ಡಣ್ಣ ಇವರು ದಿನಾಂಕ:07–07–2023 ರಂದು ಪ್ರಾಧಿಕಾರಕ್ಕೆ ದೂರು ಅರ್ಜಿ ಸಲ್ಲಿಸಿ ಮುಳ್ಳುಸೋಗೆ ಗ್ರಾಮದ ಸ.ನಂ. 43/1 ರಲ್ಲಿನ 2.00 ಎಕರೆ, ಸ.ನಂ. 42/2 ರಲ್ಲಿ 3.50 ಎಕರೆ ಒಟ್ಟು 5.50 ಎಕರೆ ನಂಜುಂಡೇಶ್ವರ ಬಡಾವಣೆಯ ಹಳೆ ನಕ್ಷೆ ಪ್ರಕಾರ(ದಿನಾಂಕ:08–11–1995 ರಂದು ಮಂಡಲಪಂಚಾಯಿತಿಯಿಂದ ಅನುಮೋದನೆಗೊಂಡ ನಕ್ಷೆ) ದಿನಾಂಕ: 24–02–1998 ರಲ್ಲಿ ನಿ.ಸಂ. 35 ರಲ್ಲಿರುವ 0.05.50 ಸೆಂಟು ನಿವೇಶನವನ್ನು ಬಡಾವಣೆ ಮಾಲೀಕರು ಮಾರಾಟ ಮಾಡಿರುತ್ತಾರೆ ದಿನಾಂಕ:06–04–2023 ರಲ್ಲಿ ಹೊಸದಾಗಿ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆ ಪಡೆದಿರುತ್ತಾರೆ ಅದರಂತೆ ಹಿಂದೆ ಇದ್ದ ನಿವೇಶನ 35 ರ ಬದಲಾಗಿ 8 ಎಂದು ಬದಲಾಯಿಸಿರುತ್ತಾರೆ ಅಲ್ಲದೆ ವಿಸ್ತೀರ್ಣ ಕಡಿಮೆ ಮಾಡಿರುತ್ತಾರೆ (5.25) ಸುಮಾರು 0.25 ಸೆಂಟು ಕಡಿಮೆ ಮಾಡಿ ಮೋಸ ಮಾಡಿರುತ್ತಾರೆ, ಆದ್ದರಿಂದ ನಿವೇಶನ 8 ರ ವಿಸ್ತೀರ್ಣವನ್ನು ಸರಿಪಡಿಸಿಕೊಡಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ.

ಸದರಿಯವರು ದಿನಾಂಕ:30–09–2023 ರಂದು ಮತ್ತೊಮ್ಮೆ ಅರ್ಜಿ ಸಲ್ಲಿಸಿದ್ದು, ಕಾನಾನುಬಾಹಿರವಾಗಿ ಪ್ರಾಧಿಕಾರದವರು ನಕ್ಷೆ ಅನುಮೋದಿಸಿರುತ್ತಾರೆ ಎಂದು ಹೇಳಿದ್ದು, ಮಂಡಲ ಪಂಚಾಯಿತಿಯವರ ಖಾತೆಯನ್ನು ಮುಂದುವರೆಸಬೇಕಾ ಅಥವಾ ಪ್ರಾಧಿಕಾರದ ಖಾತೆಯನ್ನು ಅನುಸರಿಸಬೇಕಾ ಎಂಬ ಗೊಂಡಲ ಉಂಟಾಗಿದೆ ಹಾಗೂ ಬಡಾವಣೆ ಮಾಲೀಕರು ನಿವೇಶನಗಳ ವಿಸ್ತೀರ್ಣದಲ್ಲಿ ವ್ಯತ್ಯಾಸ ಉಂಟಾಗಿರುವುದರಿಂದ ಹೆಚ್ಚುವರಿ ವಸೂಲಿ ಮಾಡಿ ತೊಂದರೆ ಕೊಡುತ್ತಿರುವುದರಿಂದ ದಿನಾಂಕ:06–04–2023 ರಂದು ಪ್ರಾಧಿಕಾರದಿಂದ ಅನುಮೋದನೆಗೊಂಡ ಅಂತಿಮ ವಿನ್ಯಾಸ ನಕ್ಷೆಯನ್ನು ರದ್ದುಪಡಿಸಬೇಕೆಂದು ಕೋರಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಕುಶಾಲನಗರ ಇವರು ದಿನಾಂಕ: 04–11–2021 ರಂದು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ ಮುಳ್ಳುಸೋಗೆ ಗ್ರಾಮದ ಸ.ನಂ. 43/1 ರಲ್ಲಿನ 2.00 ಎಕರೆ, ಸ.ನಂ. 42/2 ರಲ್ಲಿ 3.50 ಎಕರೆ ಒಟ್ಟು 5.50 ಎಕರೆ ವಿಸ್ತೀರ್ಣದ ಜಮೀನನ್ನು ಭೂಮಾಲೀಕರು ಅಭಿವೃದ್ಧಿಪಡಿಸಲು ಉದ್ದೇಶಿಸಿರುವುದರಿಂದ ಪ್ರಶ್ನಿತ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ. ಸದರಿ ಜಮೀನಿನ ಎಂಟು ಜನ ನಿವೇಶನ ಖರೀದಿದಾರರು ನೋಟರಿ ದೃಢೀಕೃತ ಅಫಿಡೆವಿಟ್ ಸಲ್ಲಿಸಿದ್ದು, ಅದರಲ್ಲಿ ಬಡಾವಣೆ ಮಾಲೀಕರು ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ವಿದ್ಯುದೀಕರಣ, ಒಳಚರಂಡಿ, ಉದ್ಯಾನವನ ಇತ್ಯಾದಿಗಳನ್ನು ಅಭಿವೃದ್ಧಿಪಡಿಸಲು ನಮ್ಮಗಳ ಆಕ್ಷೇಪಣೆ ಇರುವುದಿಲ್ಲವೆಂದು ಹಾಗೂ

ಒಂದೊಮ್ಮೆ ನಮ್ಮ ನಿವೇಶನದ ಅಳತೆ ಇತ್ಯಾದಿ ವಿನ್ಯಾಸ ನಕ್ಷೆಯಲ್ಲಿ ಗುರುತಿಸುವಾಗ ವ್ಯತ್ಯಾಸವಾಗಿದ್ದಲ್ಲಿ ದಾಖಲೆಗಳನ್ನು ನಿಯಮಾನುಸಾರ ಸದರಿಯವರು ನಮಗೆ ತಿದ್ದುಪಡಿ ಮಾಡಿಕೊಡಲು ನಮ್ಮ ಆಕ್ಷೇಪಣೆ ಇರುವುದಿಲ್ಲ ಎಂದು ಪ್ರಮಾಣೀಕರಿಸುತ್ತಿದ್ದೇವೆ ಎಂಬುದಾಗಿ ಈ ಕಛೇರಿಗೆ ಅಫಿಡೆವಿಟ್ ಸಲ್ಲಿಸಿರುತ್ತಾರೆ. ಅಲ್ಲದೆ, ಬಡಾವಣೆ ಮಾಲೀಕರುಗಳು ಅಫಿಡೆವಿಟ್ ಸಲ್ಲಿಸಿದ್ದು, ಸದರಿ ಅಫಿಡೆವಿಟ್‌ನಲ್ಲಿ ಕುಶಾಲನಗರ ಯೋಜನಾ ಪ್ರಾಧಿಕಾರದಿಂದ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅದರಂತೆ ಸ್ಥಳದಲ್ಲಿ ಅಭಿವೃದ್ಧಿಪಡಿಸುತ್ತೇವೆಂದು, ಅನುಮೋದಿತ ನಕ್ಷೆಯಂತೆ ನಿವೇಶನಗಳನ್ನು ನಮಗೆ ಲಭ್ಯವಾಗುವ ವಿಸ್ತೀರ್ಣಕ್ಕೆ ಅನುಗುಣವಾಗಿ ಹಂಚಿಕೊಳ್ಳುತ್ತೇವೆಂದು, ಯಾವುದೇ ತಂಟೆ ತಕರಾರು ಉದ್ಭವಿಸಿದಲ್ಲಿ ಸಲಹೆಗಾರರನ್ನು ನೇಮಕ ಮಾಡಿಕೊಂಡು ಅವರು ಕೊಡುವ ತೀರ್ಪಿಗೆ ಬದ್ಧರಾಗಿರುತ್ತೇವೆಂದು ಹಾಗೂ ಭೂಪರಿವರ್ತಿತ ಜಮೀನಿನ ಸರ್ವೆ ನಕ್ಷೆಯಲ್ಲಿನ ಅಳತೆಗಳಿಗನುಗುಣವಾಗಿ ಲಭ್ಯವಿರುವ ವಿಸ್ತೀರ್ಣಕ್ಕೆ ಬಹುನಿವೇಶನ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಮಾಡಿಕೊಡಲು ನಮ್ಮ ಆಕ್ಷೇಪಣೆ ಇರುವುದಿಲ್ಲ ಎಂಬುದಾಗಿ ಒಪ್ಪಿಗೆಯನ್ನು ಸಲ್ಲಿಸಿರುತ್ತೇವೆ ಹಾಗೂ ವಿನ್ಯಾಸ ಅನುಮೋದನೆ ನೀಡುವಂತೆ ಕೋರುತ್ತಿದ್ದೇವೆ ಎಂಬುದಾಗಿ ಈ ಕಛೇರಿಗೆ ಅಫಿಡೆವಿಟ್ ಸಲ್ಲಿಸಿರುತ್ತಾರೆ. ಇದರ ಆಧಾರದ ಮೇಲೆ ವಿಷಯವನ್ನು ದಿನಾಂಕ:24–12–2021 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ವಿಷಯವನ್ನು ಮಂಡಿಸಲಾಗಿದ್ದು, ಸದರಿ ಸಭೆಗೆ ಮುಖ್ಯಾಧಿಕಾರಿಗಳು, ಪಟ್ಟಣಪಂಚಾಯಿತಿ, ಕುಶಾಲನಗರ ಇವರು ಹಾಜರಾಗಿರುತ್ತಾರೆ. ಸಭೆಯ ನಿರ್ಣಯದಂತೆ ಪ್ರಾಧಿಕಾರದಿಂದ ದಿನಾಂಕ: 31–03–2022 ರಂದು ಸದರಿ ಜಮೀನಿನ ಕರಡು ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ. ಬಡಾವಣೆ ಮಾಲೀಕರು ಅನುಮೋದಿತ ಕರಡು ವಿನ್ಯಾಸ ನಕ್ಷೆಯಂತೆ ಜಮೀನನ್ನು ಅಭಿವೃದ್ಧಿಪಡಿಸಿ ಸಂಬಂಧಪಟ್ಟ ಇಲಾಖೆಗಳಾದ ಕರ್ನಾಟಕ ನಗರ ನೀರು ಸರಬಾರಾಜು ಹಾಗೂ ಒಳಚರಂಡಿ ಮಂಡಳಿ, ತೋಟಗಾರಿಕೆ ಇಲಾಖೆ, ಚೆಸ್ಕಾಂ, ಮತ್ತು ರಸ್ತೆ, ಚರಂಡಿ ನಿರ್ಮಾಣ ಮಾಡಿರುವ ಬಗ್ಗೆ ಮುಖ್ಯಾಧಿಕಾರಿ, ಪುರಸಭೆ ಇವರುಗಳಿಂದ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರ ಪಡೆದು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಮುಖ್ಯಾಧಿಕಾರಿ ಪುರಸಭೆ ಇವರು ದಿನಾಂಕ: 10–02–2023 ರಂದು ಸದರಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವಂತೆ ಹಾಗೂ ನಿವೇಶನಗಳನ್ನು ಬಿಡುಗಡೆಮಾಡುವಂತೆ ಈ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಸಂದರ್ಭದಲ್ಲಿ ನಿವೇಶನಗಳನ್ನು ಖರೀದಿಸಿದ ಜನರು ಪ್ರಾಧಿಕಾರಕ್ಕೆ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಪ್ರಾಧಿಕಾರದಿಂದ ಈಗಾಗಲೇ ಕರಡು ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವುದರಿಂದ ಮತ್ತು ಅದರಂತೆ ಜಮೀನನ್ನು ಅಭಿವೃದ್ಧಿಪಡಿಸಿರುವುದರಿಂದ ಸದರಿ ಪ್ರಸ್ತಾವನೆಯನ್ನು ದಿನಾಂಕ: 17–02–2023 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಸಭೆಯ ನಿರ್ಣಯದಂತೆ ಪ್ರಾಧಿಕಾರದಿಂದ ದಿನಾಂಕ: 06–04–2023 ರಂದು ಅಂತಿಮ ಅನುಮೋದನೆ ನೀಡಲಾಗಿದೆ ಹಾಗೂ ನಿವೇಶನಗಳನ್ನು ಬಿಡುಗಡೆಗೊಳಿಸಲಾಗಿದೆ. ಅಂತಿಮ ಅನುಮೋದನೆ ಆದೇಶ ಪತ್ರದಲ್ಲಿ ಷರತ್ತು ಸಂಖ್ಯೆ(2) ರಲ್ಲಿ ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿ ಆಗಿರುವುದಿಲ್ಲ ಜಮೀನಿನ ಎಲ್ಲೆಯ ಬಗ್ಗೆ ಯಾವುದಾದರೂ ತಕರಾರುಗಳು ಇದ್ದಲ್ಲಿ ಅರ್ಜಿದಾರರೆ ಹೊಣೆಗರರಾಗಿದ್ದು, ಈ ಇಲಾಖೆಗೆ ಯಾವುದೇ ಜವಾಬ್ದಾರಿ ಇರುವುದಿಲ್ಲ ಎಂದು ಷರತ್ತು ವಿಧಿಸಲಾಗಿದೆ ಮತ್ತು ಷರತ್ತು ಸಂಖ್ಯೆ(10) ರಲ್ಲಿ ಈ ಸಂದರ್ಭದಲ್ಲಿ ಇರುವ ಕಾನೂನಿನ ಅಡಿಯಲ್ಲಿ, ಸಲ್ಲಿಸಿರುವ ಸರ್ವೆ ನಕ್ಷೆಯ ಸರಹದ್ದಿನ ಆಧಾರದ ಮೇಲೆ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಲಾಗಿದೆ, ಯಾವುದೇ ತಕರಾರುಗಳಿಗೆ ಮತ್ತು ಸಿವಿಲ್ ವ್ಯಾಜ್ಯಗಳಿಗೆ ಅರ್ಜಿದಾರರೇ ಹೊಣೆಗಾರರಾಗಿದ್ದು, ಪ್ರಾಧಿಕಾರ ಜವಾಬ್ದಾರಿಯಾಗಿರುವುದಿಲ್ಲ ಎಂದು ಷರತ್ತು ವಿಧಿಸಲಾಗಿದೆ.

ಸದಸ್ಯಕಾರ್ಯದರ್ಶಿ ಅಭಿಪ್ರಾಯ: ಶ್ರೀ ಆರ್.ಎಸ್. ದೊಡ್ಡಣ್ಣ ಇವರು ದಿನಾಂಕ:07–07–2023 ರಂದು ಪ್ರಾಧಿಕಾರಕ್ಕೆ ಸಲ್ಲಿಸಿರುವ ದೂರು ಅರ್ಜಿಗೆ ಸಂಬಂಧಿಸಿದಂತೆ ಈ ಕಛೇಯಿಂದ ದಿನಾಂಕ: 19–08–2023 ರಂದು

ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರಿಗೆ ಪತ್ರ ಬರೆದು ಮಂಡಲಪಂಚಾಯಿತಿಯಿಂದ ದಿನಾಂಕ:08–11–1995 ರಂದು ವಿನ್ಯಾಸ ನಕ್ಷೆ ಅನುಮೋದನೆಗೊಂಡ ಆದೇಶದ ಪ್ರತಿ ಮತ್ತು ವಿನ್ಯಾಸ ನಕ್ಷೆಯ ಪ್ರತಿ, ಸದರಿ ವಿನ್ಯಾಸ ನಕ್ಷೆಯನ್ನು ಅನುಮೋದಿಸಲು ಮಂಡಲಪಂಚಾಯಿತಿಯ ಸಭೆಯಲ್ಲಿ ನಿರ್ಣಯಿಸಿರುವ ಬಗ್ಗೆ ಸಭಾ ನಡಾವಳಿಯ ಪ್ರತಿ, ಸದರಿ ವಿನ್ಯಾಸ ನಕ್ಷೆಯಲ್ಲಿನ ನಿವೇಶನಗಳು ನಮೂದಾಗಿರುವ ಜಮಾಬಂದಿಯ ಪ್ರತಿಗಳು, ಮಂಡಲಪಂಚಾಯಿತಿಯಿಂದ ಅನುಮೋದನೆಗೊಂಡ ವಿನ್ಯಾಸ ನಕ್ಷೆಯನ್ನು ರದ್ದುಪಡಿಸುವ ಬಗ್ಗೆ ಮಂಡಲಪಂಚಾಯಿತಿಯ ಸಭೆಯಲ್ಲಿ ನಿರ್ಣಯಿಸಿರುವ ಸಭಾ ನಡಾವಳಿಯ ಪ್ರತಿ ಮತ್ತು ಈ ಕಛೇರಿಯಿಂದ ಅನುಮೋದನೆ ನೀಡಿರುವ ಅಂತಿಮ ವಿನ್ಯಾಸ ನಕ್ಷೆಯಂತೆ ನಿವೇಶನಗಳನ್ನು ಸಾರ್ವಜನಿಕರು ಖರೀದಿಸಿದ್ದರೆ, ಅದಕ್ಕೆ ತಮ್ಮ ಕಛೇರಿಯಿಂದ ನಮೂನೆ–3 ನೀಡಿದ್ದರೆ, ಅದರ ಪ್ರತಿಗಳನ್ನು ನೀಡುವಂತೆ ಮುಖ್ಯಾಧಿಕಾರಿಗಳಿಗೆ ಪತ್ರ ಬರೆದು ಕೋರಲಾಗಿದೆ ಮತ್ತು ಸದರಿ ಪತ್ರದ ಪ್ರತಿಯನ್ನು ಶ್ರೀ ಆರ್.ಎಸ್. ದೊಡ್ಡಣ್ಣ ಇವರಿಗೆ ನೀಡಲಾಗಿದೆ.

ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಸುತ್ತೋಲೆಗಳ ಸಂಖ್ಯೆ: ನಗ್ರಾಯೋನಿ/ಕಟ್ಟಡ ಪರವಾನಿಗೆ/ಸುತ್ತೋಲೆ/2015–16 ದಿನಾಂಕ:22–01–2016 ಮತ್ತು ನಗ್ರಾಯೋನಿ:ಕಟ್ಟಡ: ಪರವಾನಿಗೆ:ಸುತ್ತೋಲೆ:2015–16 ದಿನಾಂಕ:04–05–2017 ರಂತೆ ಸ್ಥಳೀಯ ಸಂಸ್ಥೆಯಿಂದ ಅನುಮೋದನೆಗೊಂಡ ವಿನ್ಯಾಸ ನಕ್ಷೆಯ ನಿವೇಶನಗಳಲ್ಲಿ ಕಟ್ಟಡ ನಿರ್ಮಿಸಲು ತಾಂತ್ರಿಕ ಅನುಮೋದನೆ ನೀಡಬಾರದೆಂದು ಸುತ್ತೋಲೆಯನ್ನು ಹೊರಡಿಸಲಾಗಿದ್ದು, ಅದರಂತೆ ಯೋಜನಾ ಪ್ರಾಧಿಕಾರದಿಂದ ಅಥವಾ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಅನುಮೋದನೆಗೊಂಡ ವಸತಿ ಬಡಾವಣೆಯಲ್ಲಿನ ನಿವೇಶನಗಳಲ್ಲಿ ಮಾತ್ರ ಕಟ್ಟಡ ನಿರ್ಮಿಸಲು ತಾಂತ್ರಿಕ ಅನುಮೋದನೆ ನೀಡಲಾಗುತ್ತಿದೆ. ಮಂಡಲಪಂಚಾಯಿತಿ ಅಥವಾ ಗ್ರಾಮಪಂಚಾಯಿತಿಯಿಂದ ಅನುಮೋದನೆಗೊಂಡ ವಸತಿ ವಿನ್ಯಾಸ ನಕ್ಷೆಯ ನಿವೇಶನಗಳಿಗೆ ಖಾತೆ ತೆರೆದಿದ್ದರೂ ಸಹ ಕಟ್ಟಡ ನಿರ್ಮಿಸಲು ತಾಂತ್ರಿಕ ಅನುಮೋದನೆ ನೀಡಲು ಸಾಧ್ಯವಿಲ್ಲ. ಆದ್ದರಿಂದ ಯೋಜನಾ ಪ್ರಾಧಿಕಾರದಿಂದ ಅಥವಾ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಅನುಮೋದನೆಗೊಂಡ ವಿನ್ಯಾಸ ನಕ್ಷೆಯು ಅಧಿಕೃತವಾಗಿದ್ದು, ಅನುಮೋದನೆಗೊಂಡ ನಕ್ಷೆಯಂತೆ ನಿವೇಶನಗಳಿಗೆ ಸ್ಥಳಿಯ ಸಂಸ್ಥೆಯಲ್ಲಿ ಖಾತೆ ನೊಂದಾಯಿಸಬೇಕಾಗಿರುತ್ತದೆ. ಆದರೆ ದಿನಾಂಕ:08–11–1995 ರಂದು ಕುಶಾಲನಗರ ಮಂಡಲಪಂಚಾಯಿತಿಯವರು ಸದರಿ ಜಮೀನಿನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವುದು ಸರಿಯಾದ ಕ್ರಮವಾಗಿರುವುದಿಲ್ಲ.

ಯೋಜನಾ ಪ್ರಾಧಿಕಾರದಿಂದ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡುವಾಗ ಕೆ.ಟಿ.ಸಿ.ಪಿ ಕಾಯ್ದೆಯನ್ವಯ ಜಮೀನಿನಲ್ಲಿ ಶೇಕಡಾ 10% ರಷ್ಟು ಉದ್ಯಾನವನಕ್ಕಾಗಿ, ಶೇಕಡಾ 5% ರಷ್ಟು ನಾಗರೀಕ ಸೌಲಭ್ಯಕ್ಕಾಗಿ ಜಮೀನನ್ನು ಕಾಯ್ದಿರಿಸಬೇಕಾಗಿದೆ ಮತ್ತು ಕನಿಷ್ಟ 9.0ಮೀ ಅಗಲದ ರಸ್ತೆಗಳನ್ನು ವಿನ್ಯಾಸ ನಕ್ಷೆಯಲ್ಲಿ ಅಳವಡಿಸಬೇಕಾಗಿದ್ದು, ಉಳಿಕೆ ಜಮೀನಿನಲ್ಲಿ ನಿವೇಶನಗಳನ್ನು ಅಳವಡಿಸಬೇಕಾಗಿದೆ. ಇಂತಹ ಸಂದರ್ಭದಲ್ಲಿ ನಿವೇಶನಗಳ ಅಳತೆಗಳಲ್ಲಿ ವ್ಯತ್ಯಾಸ ಉಂಟಾಗುತ್ತದೆ.

ಸದರಿ ವಿನ್ಯಾಸ ನಕ್ಷೆಗೆ ಬಡಾವಣೆ ಮಾಲೀಕರು ಕರಡು ಅನುಮೋದನೆ ಪಡೆದು (ದಿನಾಂಕ: 31–03–2022) ಜಮೀನನ್ನು ಅಭಿವೃದ್ಧಿಪಡಿಸುತ್ತಿರುವ ಸಂದರ್ಭದಲ್ಲಾಗಲೀ ಅಥವಾ ಅಂತಿಮ ಅನುಮೋದನೆ (ದಿನಾಂಕ: 06–04–2023) ನೀಡುವ ಸಂದರ್ಭದಲ್ಲಾಗಲೀ ಶ್ರೀ ಆರ್.ಎಸ್. ದೊಡ್ಡಣ್ಣ ಇವರು ಅವರು ನಿವೇಶನ ಖರೀದಿಸಿರುವ ಬಗ್ಗೆ ಯಾವುದೇ ಮಾಹಿತಿಯನ್ನಾಗಲೀ ಅಥವಾ ಆಕ್ಷೇಪಣೆಯನ್ನಾಗಲೀ ಪ್ರಾಧಿಕಾರಕ್ಕೆ ನೀಡಿರುವುದಿಲ್ಲ. ಇವರು ಸಲ್ಲಿಸಿರುವ ಅರ್ಜಿಯಲ್ಲಿ ಬಡಾವಣೆ ಮಾಲೀಕರಾದ ಎಸ್. ಪಿ. ಸುರೇಶ್ ಮತ್ತು ಇತರರು ನಿವೇಶನಗಳ ವಿಸ್ತೀರ್ಣದಲ್ಲಿ ವ್ಯತ್ಯಾಸ ಉಂಟಾಗಿರುವ ಕಾರಣವನ್ನು ಮುಂದಿಟ್ಟುಕೊಂಡು ಖರೀದಿದಾರರಿಂದ ಪುನ: ಹೆಚ್ಚುವರಿ ಹಣ ವಸೂಲಿ ಮಾಡಿ ತೊಂದರೆ ಕೊಡುತ್ತಿದ್ದಾರೆ ಆದ್ದರಿಂದ ಅಂತಿಮ ವಿನ್ಯಾಸ ನಕ್ಷೆಯನ್ನು ರದ್ದುಪಡಿಸಬೇಕೆಂದು ಕೋರಿರುತ್ತಾರೆ. ಆದರೆ ಇವರ ಹಾಗೂ ಬಡಾವಣೆ ಮಾಲೀಕರ ನಡುವಿನ

ಹಣಕಾಸಿಕ ವಿಚಾರವು ಅವರಿಬ್ಬರ ನಡುವಿನ ವೈಯಕ್ತಿಕ ಜಗಳವಾಗಿರುವುದರಿಂದ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಹೊಣೆಯಾಗಿರುವುದಿಲ್ಲ.

ದೂರುದಾರರು ಮತ್ತೊಮ್ಮೆ ದೂರು ಅರ್ಜಿ ಸಲ್ಲಿಸಿರುವುದರಿಂದ ದಿನಾಂಕ: 17–10–2023 ರಂದು ದೂರುದಾರರಿಗೆ ಪತ್ರ ಬರೆದು ಸದರಿ ದೂರು ಅರ್ಜಿಯ ಬಗ್ಗೆ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಸಭೆಯ ನಿರ್ಣಯದಂತೆ ಕ್ರಮವಹಿಸಲಾಗುವುದು ಎಂದು ತಿಳಿಸಲಾಗಿದೆ. ಸದರಿ ದೂರು ಅರ್ಜಿಗಳನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ನಿರ್ಣಯ: ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ದೂರುದಾರರ ಕೋರಿಕೆಯಂತೆ ಅವರ ಮಾಲೀಕತ್ವದಲ್ಲಿರುವ ವಿಸ್ತೀರ್ಣಕ್ಕೆ ಅನುಗುಣವಾಗಿ ನಿವೇಶನದ ಖಾತೆಯನ್ನು ನೊಂದಾಯಿಸುವಂತೆ ಸಭೆಯಲ್ಲಿ ಪುರಸಭೆ ಮುಖ್ಯಾಧಿಕಾರಿಗಳಿಗೆ ಸೂಚಿಸಲಾಗಿದ್ದು, ಅದರಂತೆ ಕ್ರಮವಹಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(04): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 42/14 ರಲ್ಲಿ 0.95 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವಂತೆ ಹಾಗೂ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಮಂಜೇಗೌಡ ಬಿ.ವಿ**).

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ಸದರಿ ಜಮೀನನ್ನು ಕರಡು ವಸತಿ ವಿನ್ಯಾಸ ನಕ್ಷೆ ಪ್ರಕಾರ ಅಭಿವೃದ್ಧಿಗೊಳಿಸಿದ್ದು, ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರಗಳನ್ನು ಸಲ್ಲಿಸಿರುವುದರಿಂದ ಅಂತಿಮ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಹಾಗೂ ನಿವೇಶನಗಳನ್ನು ಬಿಡುಗಡೆ ಮಾಡುವಂತೆ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಭೂಪರಿ/234/2012–13 ದಿನಾಂಕ: 24–05–2013 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಸದರಿ ಜಮೀನು ಉತ್ತರ ದಿಕ್ಕಿನಲ್ಲಿ 6.0ಮೀ ಅಗಲದ ಗ್ರಾಮಪಂಚಾಯಿತಿ ರಸ್ತೆಯಿಂದ ಸಂಪರ್ಕಹೊಂದಿದೆ.

ಕರಡು ವಿನ್ಯಾಸ ನಕ್ಷೆ ಅನುಮೋದನೆ ನೀಡುವಾಗ ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಉತ್ತಾರು ನಕ್ಷೆ, ಆಕಾರ್ ಬಂದ್(ಉತಾರು), ಮ್ಯುಟೇಷನ್ ಪ್ರತಿ, ಅಲಿನೇಷನ್ ನಕ್ಷೆ, ಆರ್.ಟಿ.ಸಿ, ಇ.ಸಿ. ಪ್ರತಿ, ಕ್ರಯಪತ್ರ, ಗ್ರಾಮನಕ್ಷೆ, ಜಮೀನಿನ ಕಾಂಟೂರ್ ನಕ್ಷೆ ದಾಖಲಾತಿಗಳನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

ಕರಡು ವಿನ್ಯಾಸ ನಕ್ಷೆ ಅನುಮೋದನೆ: ಸದರಿ 6.0ಮೀ ಅಗಲದ ಗ್ರಾಮಪಂಚಾಯಿತಿ ರಸ್ತೆಯನ್ನು ಮಹಾಯೋಜನೆಯಂತೆ 12.0ಮೀ ಅಗಲೀಕರಣಕ್ಕೆ ಪ್ರಸ್ತಾವಿಸಿ, ಪ್ರಶ್ನಿತ ಜಮೀನಿನ ಕರಡು ವಿನ್ಯಾಸ ನಕ್ಷೆಗೆ ದಿನಾಂಕ:31–08–2015 ರಂದು ಈ ಕಛೇರಿಯಿಂದ ಅನುಮೋದನೆ ನೀಡಲಾಗಿದೆ.

ಪರಿಷ್ಕೃತ ವಿನ್ಯಾಸ ನಕ್ಷೆ ಅನುಮೋದನೆ: ದಿನಾಂಕ: 23–02–2022 ರಂದು ಪ್ರಸ್ತುತ ವಲಯ ನಿಯಮಾವಳಿಯಂತೆ ಪರಿಷ್ಕೃತ ಕರಡು ವಸತಿ ವಿನ್ಯಾಸ ನಕ್ಷೆಗೆ ಪ್ರಾಧಿಕಾರ ಸಭೆ ದಿನಾಂಕ:24–12–2021 ರಲ್ಲಿ ವಿಷಯ ಸಂಖ್ಯೆ (12)ರ ನಿರ್ಣಯದನ್ವಯ ಅನುಮೋದನೆ ನೀಡಲಾಗಿದೆ.

ಪರಿಷ್ಕೃತ ಕರಡು ವಿನ್ಯಾಸ ನಕ್ಷೆಯಲ್ಲಿ ಭೂಉಪಯೋಗ ವಿಶ್ಲೇಷಣೆ ಈ ಕೆಳಕಂಡಂತೆ ಇರುತ್ತದೆ:

ಕ್ರ. ಸಂ	ಭೂಉಪಯೋಗ	ವಿಸ್ತೀರ್ಣ (ಚ.ಮೀ ಗಳಲ್ಲಿ)	ಶೇಕಡ (%)
1	ವಸತಿ	2006.17	52.19
2	ಉದ್ಯಾನವನ ಮತ್ತು ಆಟದ ಮೈದಾನಕ್ಕಾಗಿ	385.25	10.02
3	ನಾಗರೀಕ ಸೌಲಭ್ಯ	192.60	5.00
4	ರಸ್ತೆಗಾಗಿ	1260.15	32.78
	ಒಟ್ಟು	3844.47	100.00

ನಿವೇಶನಗಳ ವಿವರ	
ನಿವೇಶನಗಳು	ಸಂಖ್ಯೆ
9.00ಮೀ 12.00	04
ಅನಿಯತ ನಿವೇಶನಗಳು	07
ಒಟ್ಟು	11

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶಕ್ಕೆ ರೂಪಿಸಿರುವ ಮಹಾಯೋಜನೆಯ ವಲಯ ನಿಯಮಾವಳಿಗಳನ್ವಯ ಬಹುನಿವೇಶನ ವಸತಿ ವಿನ್ಯಾಸ ನಕ್ಷೆಗೆ ಶೇಕಡಾವಾರು ಕನಿಷ್ಟ ಭೂಉಪಯೋಗಗಳು: ಉದ್ಯಾನವನ ಮತ್ತು ಆಟದ ಮೈದಾನಕ್ಕಾಗಿ ಕನಿಷ್ಟ ಶೇ. 10% ರಷ್ಟು ಮತ್ತು ನಾಗರೀಕ ಸೌಲಭ್ಯಕ್ಕಾಗಿ ಕನಿಷ್ಟ ಶೇ. 5% ರಷ್ಟು ನಿಗಧಿಪಡಿಸಲಾಗಿದೆ.

ಸ್ಥಳಪರಿಶೀಲನೆ ವಿವರ: ಸದರಿ ಜಮೀನಿನ ಸ್ಥಳ ಪರಿಶೀಲನೆಯನ್ನು ದಿನಾಂಕ:17–10–2023 ರಂದು ಮಾಡಲಾಗಿದೆ ಮತ್ತು ಎಲ್ಲಾ ನಿವೇಶನಗಳ ಅಳತೆಯನ್ನು ಮಾಡಲಾಗಿದೆ. ಬಡಾವಣೆ ಮಾಲೀಕರು ಪರಿಷ್ಕೃತ ಕರಡು ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಅಭಿವೃದ್ಧಿಪಡಿಸಿರುತ್ತಾರೆ. ಪರಿಷ್ಕೃತ ಕರಡು ವಿನ್ಯಾಸ ನಕ್ಷೆಯ ನಿವೇಶನ ಸಂಖ್ಯೆ 1 ರಲ್ಲಿ ಕಟ್ಟಡ ಕಂಡುಬಂದಿರುತ್ತದೆ ಹಾಗೂ ಸದರಿ ಕಟ್ಟಡಕ್ಕೆ ಭೂಪರಿವರ್ತನೆ ಸಂದರ್ಭದಲ್ಲಿ ದಂಡವನ್ನು ಪಾವತಿಸಿರುತ್ತಾರೆ. ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ, ಚರಂಡಿ, ವಿದ್ಯುಚ್ಛಕ್ತಿ, ನೀರು ಸರಬರಾಜು ಮತ್ತು ಒಳಚರಂಡಿ ಹಾಗೂ ಉದ್ಯಾನವನ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಇಲಾಖೆಗಳಾದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ, ಕುಶಾಲನಗರ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮೈಸೂರು, ತೋಟಗಾರಿಕೆ ಇಲಾಖೆ ಸೋಮವಾರಪೇಟೆ ಹಾಗೂ ಪುರಸಭೆ, ಕುಶಾಲನಗರ ಇವರುಗಳಿಂದ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರವನ್ನು ಪಡೆದು ಸಲ್ಲಿಸಿರುತ್ತಾರೆ. ಅರ್ಜಿದಾರರು ಸದರಿ ಜಮೀನಿನ ಇತ್ತೀಚಿನ ಆರ್.ಟಿ.ಸಿ, ಮ್ಯುಟೇಷನ್ ಪ್ರತಿ, ಇ.ಸಿ. ಪ್ರತಿ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ಪ್ರಶ್ನಿತ ಜಮೀನಿನ ಉತ್ತರ ದಿಕ್ಕಿನಲ್ಲಿರುವ ಹಾಲಿ 6.0ಮೀ ಅಗಲದ ಗ್ರಾಮ ರಸ್ತೆಯನ್ನು ಮಹಾಯೋಜನೆಯಂತೆ 12.0ಮೀ ಅಗಲಕ್ಕೆ ವಿಸ್ತರಿಸುವ ಷರತ್ತಿಗೊಳಪಟ್ಟಿದ್ದು, ಸದರಿ ರಸ್ತೆಯು ಎರಡು ಬಡಾವಣೆಗಳ ಮಧ್ಯೆ ಹಾದುಹೋಗುತ್ತಿದ್ದು, ರಸ್ತೆ ಮಧ್ಯಭಾಗದಿಂದ 6.0ಮೀ ಅಗಲವನ್ನು ಎರಡು ಬಡಾವಣೆಯವರು ಕಾಯ್ದಿರಿಸುವ ಷರತ್ತಿಗೆ ಒಳಪಟ್ಟಿರುತ್ತಾರೆ. ಸದರಿ ಜಮೀನಿನ ಮಾಲೀಕರು ರಸ್ತೆ ಮಧ್ಯ ಭಾಗದಿಂದ 6.0ಮೀ ಅಗಲಕ್ಕೆ ದಕ್ಷಿಣದ ಕಡೆಗೆ ಅಂತರವನ್ನು ಕಾಯ್ದಿರಿಸಿರುತ್ತಾರೆ.

ಆದರೆ ಉತ್ತರ ದಿಕ್ಕಿನಲ್ಲಿರುವ ಸ.ನಂ. 36/2 ರಲ್ಲಿನ 2.30 ಎಕರೆ ಪೈಕಿ 2.00 ಎಕರೆ ವಸತಿ ಉದ್ದೇಶದ ಹಾಗೂ 0.30 ಎಕರೆ ವಾಣಿಜ್ಯ ಉದ್ದೇಶದ ಕರಡು ವಿನ್ಯಾಸ ನಕ್ಷೆಗೆ ಈ ಕಛೇರಿ ಆದೇಶ ಸಂಖ್ಯೆ: ಕುಯೋಪ್ರಾ/ಸಕಾ/ಸೋ.ತಾ/ಮುಳ್ಳುಸೋಗೆ ಗ್ರಾಮ/ವಿ.ಅ/03/188/2020–21 ದಿನಾಂಕ:10–11–2020 ರಂದು ಅನುಮೋದನೆ ನೀಡಿದ್ದು (ಮಾಲೀಕರು: ಶ್ರೀ ಜಿ.ಬಿ. ಜಗದೀಶ್), ಅದರಲ್ಲಿ ವಾಣಿಜ್ಯ ಉದ್ದೇಶದ ಕಡೆಗೆ ಲಗತ್ತಾಗಿರುವ ಸದರಿ ರಸ್ತೆಯ ಮಧ್ಯಭಾಗದಿಂದ ಉತ್ತರದ ಕಡೆಗೆ 6.0ಮೀ ಬದಲು ಕೇವಲ 4.35ಮೀ ಅಗಲದಷ್ಟು ಮಾತ್ರ ಜಾಗವನ್ನು ಕಾಯ್ದಿರಿಸಿ ತಮ್ಮ ಜಮೀನನ್ನು ಅಭಿವೃದ್ಧಿಪಡಿಸಿರುತ್ತಾರೆ. ನಕ್ಷೆಯನ್ನು ಪರಿಶೀಲಿಸಿದಾಗ ಸದರಿ ಗ್ರಾಮರಸ್ತೆಯ ಅಗಲ 9.0ಮೀ ರಸ್ತೆ ಎಂದು ನಮೂದಾಗಿರುತ್ತದೆ. (ಅಂದರೆ 4.35ಮೀ ಅಗಲದ ಜಾಗವನ್ನು ಕಾಯ್ದಿರಿಸಿರುವುದು ನಕ್ಷೆಯ ಪ್ರಕಾರ ಸರಿಯಾಗಿರುತ್ತದೆ.) ಸದರಿ ರಸ್ತೆಯನ್ನು 12.0ಮೀಗೆ ವಿಸ್ತರಿಸಲು ಶ್ರೀ ಜಿ.ಬಿ. ಜಗದೀಶ್ ಇವರ ಜಮೀನಿಗೆ ಕಡೆಗೆ ಹೆಚ್ಚುವರಿ 1.65ಮೀ ಅಗಲದ ಜಾಗವನ್ನು ಕಾಯ್ದಿರಿಸಬೇಕಾಗಿರುತ್ತದೆ. ಈ ಬಡಾವಣೆಯ ಕರಡು ವಿನ್ಯಾಸ ನಕ್ಷೆಗೆ ಈಗಾಗಲೇ ಅನುಮೋದನೆ ನೀಡಿದ್ದು, ಸ್ಥಳದಲ್ಲಿ ಚರಂಡಿ ನಿರ್ಮಾಣವನ್ನು ಈಗಾಗಲೇ ಮಾಡಿರುತ್ತಾರೆ. ಆದ್ದರಿಂದ 1.65ಮೀ ಹೆಚ್ಚುವರಿ ಅಗಲವನ್ನು ರಸ್ತೆಗಾಗಿ

ಕಾಯ್ದಿರಿಸಿ ವಾಣಿಜ್ಯ ನಿವೇಶನಗಳ ಅಳತೆಗಳನ್ನು ಕಡಿತಗೊಳಿಸಿ ಪರಿಷ್ಕೃತ ಕರಡು ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವುದು ಸೂಕ್ತವಾಗಿರುತ್ತದೆ.

ಅರ್ಜಿದಾರರು ಸದರಿ ಜಮೀನಿನ ಇತ್ತೀಚಿನ ಆರ್.ಟಿ.ಸಿ, ಮ್ಯುಟೇಷನ್ ಪ್ರತಿ, ಇ.ಸಿ. ಪ್ರತಿ ದಾಖಲಾಲೆಗಳನ್ನು ಸಲ್ಲಿಸಿರುತ್ತಾರೆ. ಅಂತಿಮ ವಿನ್ಯಾಸ ನಕ್ಷೆಯಲ್ಲಿ ವಸತಿ ಉದ್ದೇಶಕ್ಕೆ 2006.17ಚ.ಮೀ (ಶೇ.52.19%), ಉದ್ಯಾನವನಕ್ಕಾಗಿ 385.25 ಚ.ಮೀ (ಶೇ.10.02%), ನಾಗರೀಕ ಸೌಲಭ್ಯಕ್ಕಾಗಿ 192.60 ಚ.ಮೀ (ಶೇ.5.00%), ಮತ್ತು ರಸ್ತೆಗಾಗಿ 1260.15ಚ.ಮೀ (ಶೇ.32.78%) ವಿಸ್ತೀರ್ಣದ ಜಮೀನನ್ನು ಕಾಯ್ದಿರಿಸಲಾಗಿದೆ. ಸದರಿ ವಿನ್ಯಾಸ ನಕ್ಷೆಯಲ್ಲಿನ ರಸ್ತೆ ಮತ್ತು ಉದ್ಯಾನವನಕ್ಕೆ ಕಾಯ್ದಿರಿಸಿದ ಜಮೀನನ್ನು ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಜಮೀನನ್ನು ಯೋಜನಾ ಪ್ರಾಧಿಕಾರಕ್ಕೆ ಪರಿತ್ಯಾಜನ ಪತ್ರದ ಮುಖೇನ ಹಸ್ತಾಂತರಿಸಿದ ನಂತರ ಅಂತಿಮ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದಾಗಿದೆ ಹಾಗೂ ಶೇ. 100 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬಹುದಾಗಿದೆ. ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

ನಿರ್ಣಯ: ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಶ್ನಿತ ಜಮೀನಿನ ಉತ್ತರ ದಿಕ್ಕಿನಲ್ಲಿರುವ ಸ.ನಂ. 36/2 ರಲ್ಲಿನ 2.30 ಎಕರೆಯ ಕರಡು ವಿನ್ಯಾಸ ನಕ್ಷೆಗೆ ದಿನಾಂಕ: 10–11–2020 ರಂದು ಈಗಾಗಲೇ ಅನುಮೋದನೆ ನೀಡಿದ್ದು, ಇದರ ಮಾಲೀಕರಾದ ಶ್ರೀ ಜಿ.ಬಿ. ಜಗದೀಶ್ ಇವರಿಗೆ ನೋಟೀಸ್ ನೀಡಿ "ರಸ್ತೆಯನ್ನು 12.0ಮೀಗೆ ವಿಸ್ತರಿಸುವ ಸಂಬಂಧ ಹೆಚ್ಚುವರಿ 1.65ಮೀ ಅಗಲದ ಜಾಗವನ್ನು ವಿಸ್ತರಿಸಬೇಕೆಂದು ಹಾಗೂ ಕರಡು ವಿನ್ಯಾಸ ನಕ್ಷೆಯನ್ನು ಪರಿಷ್ಕರಿಸಿಕೊಳ್ಳಬೇಕೆಂದು" ನೋಟೀಸ್ ನೀಡುವಂತೆ ಸಭೆಯು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿತು. ಅದರಂತೆ ಶ್ರೀ ಜಿ.ಬಿ. ಜಗದೀಶ್ ಇವರು ರಸ್ತೆಯನ್ನು ವಿಸ್ತರಿಸಿದ ನಂತರ ಪ್ರಶ್ನಿತ ಮುಳ್ಳುಸೋಗೆ ಗ್ರಾಮದ ಸ.ನಂ. 42/14 ರಲ್ಲಿ 0.95 ಎಕರೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆಯನ್ನು ನೀಡಬಹುದಾಗಿದೆ ಹಾಗೂ ಶೇ. 100 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬಹುದಾಗಿದೆ ಎಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(05): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 93 ರಲ್ಲಿ 4.14 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವಂತೆ ಹಾಗೂ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುವ ಬಗ್ಗೆ **(ಅರ್ಜಿದಾರರು:– ಶ್ರೀ ರವೀಂದ್ರ ಎಂ.ಕೆ ಮತ್ತು ಅಭಿವೃದ್ಧಿದಾರರಾದ ಶ್ರೀ ಎಂ.ಆರ್. ನಂಜುಂಡ)**

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ಸದರಿ ಜಮೀನನ್ನು ಕರಡು ವಸತಿ ವಿನ್ಯಾಸ ನಕ್ಷೆ ಪ್ರಕಾರ ಅಭಿವೃದ್ಧಿಗೊಳಿಸಿದ್ದು, ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರಗಳನ್ನು ಸಲ್ಲಿಸಿರುವುದರಿಂದ ಅಂತಿಮ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಹಾಗೂ ನಿವೇಶನಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ. ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 329542 ದಿನಾಂಕ:25–08–2022 ರಂದು ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಸದರಿ ಜಮೀನು ದಕ್ಷಿಣ ದಿಕ್ಕಿನಲ್ಲಿ 9.0ಮೀ ಅಗಲದ ಬಡಾವಣೆ ರಸ್ತೆಯಿಂದ ಸಂಪರ್ಕಹೊಂದಿದೆ.

ತಾತ್ಕಾಲಿಕ ವಿನ್ಯಾಸ ನಕ್ಷೆ ಅನುಮೋದನೆ ನೀಡುವಾಗ ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಉತ್ತಾರು ನಕ್ಷೆ, ಆಕಾರ್ ಬಂದ್(ಉತಾರು), ಮ್ಯುಟೇಷನ್ ಪ್ರತಿ, ಅಲಿನೇಷನ್ ನಕ್ಷೆ, ಆರ್.ಟಿ.ಸಿ, ಇ.ಸಿ. ಪ್ರತಿ, ವಿಭಾಗಪತ್ರ, ಜಮೀನಿನ ಕಾಂಟೂರ್ ನಕ್ಷೆ, ಗ್ರಾಮನಕ್ಷೆ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ತಾತ್ಕಾಲಿಕ ವಿನ್ಯಾಸ ನಕ್ಷೆ ಅನುಮೋದನೆ: ತಾತ್ಕಾಲಿಕ ಅನುಮೋದನೆ ಮಹಾಯೋಜನೆಯಲ್ಲಿ ಪ್ರಸ್ತಾಪಿಸಿರುವ 15.0ಮೀ ಅಗಲದ ರಸ್ತೆಯನ್ನು ಯಥಾವತ್ತಾಗಿ ಅಳವಡಿಸಿ, ಪ್ರಶ್ನಿತ ಜಮೀನಿನ ತಾತ್ಕಾಲಿಕ ವಿನ್ಯಾಸ ನಕ್ಷೆಗೆ ಪ್ರಾಧಿಕಾರ ಸಭೆ ದಿನಾಂಕ: 08–11–2022 ರಲ್ಲಿ ವಿಷಯ ಸಂಖ್ಯೆ 06(ಅ)ರ ನಿರ್ಣಯದನ್ವಯ ದಿನಾಂಕ:12–12–2022 ರಂದು ಅನುಮೋದನೆ ನೀಡಲಾಗಿದೆ.

ತಾತ್ಕಾಲಿಕ ವಿನ್ಯಾಸ ನಕ್ಷೆಯಲ್ಲಿ ಭೂಉಪಯೋಗ ವಿಶ್ಲೇಷಣೆ ಈ ಕೆಳಕಂಡಂತೆ ಇರುತ್ತದೆ:

ಭೂಉಪಯೋಗ ವಿಶ್ಲೇಷಣೆ				ನಿವೇಶನಗಳ ವಿವರ	
ಕ್ರ. ಸಂ	ಭೂಉಪಯೋಗ	ವಿಸ್ತೀರ್ಣ (ಚ.ಮೀ ಗಳಲ್ಲಿ)	ಶೇಕಡ (%)	ನಿವೇಶನದ ಅಳತೆ	ಸಂಖ್ಯೆ
1	**ವಸತಿ**	8739.29	52.16	12.0ಮೀX18.0 ಮೀ	03
2	**ಉದ್ಯಾನವನ**	1677.48	10.01	9.0ಮೀ X 15.0 ಮೀ	29
3	**ನಾಗರೀಕ ಸೌಲಭ್ಯ**	839.36	05.01	12.0ಮೀ X ಅನಿಯತ	02
4	**ರಸ್ತೆ**	5276.52	31.50	9.0ಮೀ X ಅನಿಯತ	18
5	**ಸರ್ವೆ ನಕ್ಷೆಯಂತೆ ಕಡಿಮೆ ಇರುವ ಪ್ರದೇಶ**	221.35	01.32	ಅನಿಯತ (ಅ)	05
	ಒಟ್ಟು	**16754.00**	**100.00**	**ಒಟ್ಟು**	**57**

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶಕ್ಕೆ ರೂಪಿಸಿರುವ ಮಹಾಯೋಜನೆಯ ವಲಯ ನಿಯಮಾವಳಿಗಳನ್ವಯ ಬಹುನಿವೇಶನ ವಸತಿ ವಿನ್ಯಾಸ ನಕ್ಷೆಗೆ ಶೇಕಡಾವಾರು ಕನಿಷ್ಟ ಭೂಉಪಯೋಗಗಳು: ಉದ್ಯಾನವನ ಮತ್ತು ಆಟದ ಮೈದಾನಕ್ಕಾಗಿ ಕನಿಷ್ಟ ಶೇ. 10% ರಷ್ಟು ಮತ್ತು ನಾಗರೀಕ ಸೌಲಭ್ಯಕ್ಕಾಗಿ ಕನಿಷ್ಟ ಶೇ. 5% ರಷ್ಟು ನಿಗಧಿಪಡಿಸಲಾಗಿದೆ.

ಸ್ಥಳಪರಿಶೀಲನೆ ವಿವರ: ದಿನಾಂಕ:31–10–2023 ರಂದು ಮತ್ತು ದಿನಾಂಕ: 13–11–2023 ರಂದು ಸದರಿ ಜಮೀನಿನ ಸ್ಥಳ ಪರಿಶೀಲಿಸಲಾಗಿದೆ ಮತ್ತು ಎಲ್ಲಾ ನಿವೇಶನಗಳ ಅಳತೆಯನ್ನು ಮಾಡಲಾಗಿದೆ. ಬಡಾವಣೆ ಮಾಲೀಕರು ತಾತ್ಕಾಲಿಕ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಅಭಿವೃದ್ಧಿಪಡಿಸಿರುತ್ತಾರೆ. ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ, ಚರಂಡಿ, ವಿದ್ಯುಚ್ಛಕ್ತಿ, ನೀರು ಸರಬರಾಜು ಮತ್ತು ಒಳಚರಂಡಿ ಹಾಗೂ ಉದ್ಯಾನವನ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಾದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ, ಕುಶಾಲನಗರ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮೈಸೂರು, ತೋಟಗಾರಿಕೆ ಇಲಾಖೆ ಸೋಮವಾರಪೇಟೆ ಹಾಗೂ ಪುರಸಭೆ, ಕುಶಾಲನಗರ ಇವರುಗಳಿಂದ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರವನ್ನು ಪಡೆದು ಸಲ್ಲಿಸಿರುತ್ತಾರೆ. ಅರ್ಜಿದಾರರು ಸದರಿ ಜಮೀನಿನ ಇತ್ತೀಚಿನ ಆರ್.ಟಿ.ಸಿ, ಮ್ಯುಟೇಷನ್ ಪ್ರತಿ, ಇತ್ತೀಚಿನ ಇ.ಸಿ. ಪ್ರತಿ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ಬಡಾವಣೆ ಮಾಲೀಕರು ಜಮೀನಿನ ಪಶ್ಚಿಮ ದಿಕ್ಕಿನಲ್ಲಿರುವ 9.0ಮೀ ಅಗಲದ ರಸ್ತೆಯ ಬಲಭಾಗದ ಕಡೆಗೆ ಮಾತ್ರ ಚರಂಡಿಯನ್ನು ನಿರ್ಮಿಸಿರುತ್ತಾರೆ. ಆದರೆ ಎಡಭಾಗದಲ್ಲಿರುವ ಪಕ್ಕದ ಜಮೀನು ತಗ್ಗುಪ್ರದೇಶದಲ್ಲಿದ್ದು, ಮಳೆ ನೀರು ತಗ್ಗುಪ್ರದೇಶಕ್ಕೆ ಹರಿಯುವುದರಿಂದ ಸಂಬಂಧಪಟ್ಟ ಜಮೀನಿನ ಮಾಲೀಕರು ತಮ್ಮ ಜಮೀನಿಗೆ ಮಳೆ ನೀರು ಹರಿದುಬರುವ ಬಗ್ಗೆ ದೂರು ನೀಡುವ ಸಾಧ್ಯತೆ ಇರುತ್ತದೆ. ಆದ್ದರಿಂದ ಎಡಭಾಗದ ಕಡೆಯು ಸಹ ಚರಂಡಿ ನಿರ್ಮಿಸುವುದು ಸೂಕ್ತವಾಗಿರುತ್ತದೆ.

ಅರ್ಜಿದಾರರು ಕಾಮಗಾರಿ ಪೂರ್ಣಗೊಂಡಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ಮುಕ್ತಾಯ ದೃಢೀಕರಣ ಪತ್ರವನ್ನು ಪಡೆದು ಸಲ್ಲಿಸಿರುತ್ತಾರೆ. ವಿನ್ಯಾಸ ನಕ್ಷೆಯಲ್ಲಿರುವ ರಸ್ತೆ, ಉದ್ಯಾನವನಕ್ಕೆ ಕಾಯ್ದಿರಿಸಿದ ಜಮೀನನ್ನು ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಜಮೀನನ್ನು ಯೋಜನಾ ಪ್ರಾಧಿಕಾರಕ್ಕೆ ಪರಿತ್ಯಾಜನ ಪತ್ರದ ಮುಖೇನ ಹಸ್ತಾಂತರಿಸಬೇಕಿದೆ. ವಿಷಯವನ್ನು ಸಭೆಗೆ ಮಂಡಿಸಿದೆ.

ನಿರ್ಣಯ: ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಶ್ನಿತ ಜಮೀನಿನ ಪಶ್ಚಿಮ ದಿಕ್ಕಿನಲ್ಲಿರುವ 9.0ಮೀ ಅಗಲದ ರಸ್ತೆಯ ಎಡಭಾಗದಲ್ಲಿರುವ ಪಕ್ಕದ ಜಮೀನು ತಗ್ಗುಪ್ರದೇಶದಲ್ಲಿರುವುದರಿಂದ ಮಳೆ ನೀರು ತಗ್ಗುಪ್ರದೇಶಕ್ಕೆ ಹರಿಯುವುದರಿಂದ ಪಕ್ಕದ ಜಮೀನಿಗೆ ತೊಂದರೆ ಉಂಟಾದರೆ ಅದರ ಜವಾಬ್ದಾರಿಯನ್ನು ಭೂಮಾಲೀಕರೇ ತೆಗೆದುಕೊಳ್ಳಬೇಕೆಂಬ ಷರತ್ತಿಗೊಳಪಡಿಸಿ, ಇದರ ಬಗ್ಗೆ ಭೂಮಾಲೀಕರಿಂದ Indemnity Bond ಅನ್ನು ಪಡೆದು, ನಂತರ ವಿನ್ಯಾಸ ನಕ್ಷೆಯಲ್ಲಿರುವ ರಸ್ತೆ, ಉದ್ಯಾನವನಕ್ಕೆ ಕಾಯ್ದಿರಿಸಿದ ಜಮೀನನ್ನು ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಜಮೀನನ್ನು ಯೋಜನಾ ಪ್ರಾಧಿಕಾರಕ್ಕೆ ಪರಿತ್ಯಾಜನ ಪತ್ರದ ಮುಖೇನ ಹಸ್ತಾಂತರಿಸಿದ ನಂತರ ಪ್ರಶ್ನಿತ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಬಹುದೆಂದು ಮತ್ತು ಎಲ್ಲಾ ನಿವೇಶನಗಳನ್ನು ಬಿಡುಗಡೆಗೊಳಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(06): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಕೂಡ್ಲೂರು ಗ್ರಾಮದ ಸ.ನಂ. 66/9 ರಲ್ಲಿ 2.00 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವಂತೆ ಹಾಗೂ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಎಂ.ಎಸ್. ಕೃಷ್ಣೋಜಿರಾವ್**).

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಇವರು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ಸದರಿ ವಸತಿ ಬಡಾವಣೆಯ ಮೂಲಭೂತ ಸೌಕರ್ಯದ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರಗಳನ್ನು ಸಲ್ಲಿಸಿರುವುದರಿಂದ ಅಂತಿಮ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಹಾಗೂ ನಿವೇಶನಗಳನ್ನು ಬಿಡುಗಡೆ ಮಾಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: LNDC10000014 ದಿನಾಂಕ:09–12–2019 ರಂದು ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಸದರಿ ಜಮೀನು ಪಶ್ಚಿಮ ದಿಕ್ಕಿನಲ್ಲಿ ಎರಡು 9.0ಮೀ ಅಗಲದ ಬಡಾವಣೆ ರಸ್ತೆಗಳಿಂದ ಸಂಪರ್ಕಹೊಂದಿದೆ.

ತಾತ್ಕಾಲಿಕ ವಿನ್ಯಾಸ ನಕ್ಷೆ ಅನುಮೋದನೆ ನೀಡುವಾಗ ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಉತ್ತಾರು ನಕ್ಷೆ, ಆಕಾರ್ ಬಂದ್(ಉತಾರು), ಮ್ಯುಟೇಷನ್ ರಿಜಿಸ್ಟರ್, ಅಲಿನೇಷನ್ ನಕ್ಷೆ, ಆರ್.ಟಿ.ಸಿ, ಇ.ಸಿ. ಪ್ರತಿ, ಒಟ್ಟು ಕುಟುಂಬದ ಬಾಬ್ತು ಚರ ಹಾಗೂ ಸ್ಥಿರಾಸ್ತಿಗಳ ವಿಭಾಗ ಪತ್ರ, ಹಕ್ಕು ಬಿಡುಗಡೆ ಪತ್ರ, ಜಮೀನಿನ ಕಾಂಟೂರ್ ನಕ್ಷೆ, ಗ್ರಾಮನಕ್ಷೆ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ತಾತ್ಕಾಲಿಕ ವಿನ್ಯಾಸ ನಕ್ಷೆ ಅನುಮೋದನೆ: ಪ್ರಶ್ನಿತ ಜಮೀನಿನ ತಾತ್ಕಾಲಿಕ ವಿನ್ಯಾಸ ನಕ್ಷೆಗೆ ಪ್ರಾಧಿಕಾರ ಸಭೆ ದಿನಾಂಕ: 17–02–2023 ರಲ್ಲಿ ವಿಷಯ ಸಂಖ್ಯೆ(05) ರ ನಿರ್ಣಯದನ್ವಯ ದಿನಾಂಕ:24–04–2023 ರಂದು ಅನುಮೋದನೆ ನೀಡಲಾಗಿದೆ.

ತಾತ್ಕಾಲಿಕ ವಿನ್ಯಾಸ ನಕ್ಷೆಯಲ್ಲಿ ಭೂಉಪಯೋಗ ವಿಶ್ಲೇಷಣೆ ಈ ಕೆಳಕಂಡಂತೆ ಇರುತ್ತದೆ.

ಭೂಉಪಯೋಗ ವಿಶ್ಲೇಷಣೆ					ನಿವೇಶನಗಳ ವಿವರ	
ಕ್ರ. ಸಂ	ಭೂಉಪಯೋಗ	ವಿಸ್ತೀರ್ಣ (ಚ.ಮೀ ಗಳಲ್ಲಿ)	ಶೇಕಡ (%)		ನಿವೇಶನದ ಅಳತೆ	ನಿವೇಶನಗಳ ಸಂಖ್ಯೆ
1	ವಸತಿ	4308.046	53.22		9.0ಮೀ X 12.0 ಮೀ	12
2	ಉದ್ಯಾನವನ	812.080	10.03		9.0ಮೀ X ಅನಿಯತ	07
3	ನಾಗರೀಕ ಸೌಲಭ್ಯ	405.165	05.00		ಅನಿಯತ(ಅ)	18
4	ರಸ್ತೆ	2568.379	31.75		ಒಟ್ಟು ನಿವೇಶನಗಳು	37
	ಒಟ್ಟು	8093.670	100.00			

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶಕ್ಕೆ ರೂಪಿಸಿರುವ ಮಹಾಯೋಜನೆಯ ವಲಯ ನಿಯಮಾವಳಿಗಳನ್ವಯ ಬಹುನಿವೇಶನ ವಸತಿ ವಿನ್ಯಾಸ ನಕ್ಷೆಗೆ ಶೇಕಡಾವಾರು ಕನಿಷ್ಟ ಭೂಉಪಯೋಗಗಳು: ಉದ್ಯಾನವನ ಮತ್ತು ಆಟದ ಮೈದಾನಕ್ಕಾಗಿ ಕನಿಷ್ಟ ಶೇ. 10% ರಷ್ಟು ಮತ್ತು ನಾಗರೀಕ ಸೌಲಭ್ಯಕ್ಕಾಗಿ ಕನಿಷ್ಟ ಶೇ. 5% ರಷ್ಟು ನಿಗಧಿಪಡಿಸಲಾಗಿದೆ.

ಸ್ಥಳಪರಿಶೀಲನೆ ವಿವರ: ಸದರಿ ಜಮೀನಿನ ಸ್ಥಳ ಪರಿಶೀಲನೆಯನ್ನು ದಿನಾಂಕ:21–11–2023 ರಂದು ಮಾಡಲಾಗಿದೆ ಮತ್ತು ಎಲ್ಲಾ ನಿವೇಶನಗಳ ಅಳತೆಯನ್ನು ಮಾಡಲಾಗಿದೆ. ಅರ್ಜಿದಾರರು ತಾತ್ಕಾಲಿಕ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಅಭಿವೃದ್ಧಿಪಡಿಸಿರುತ್ತಾರೆ. ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ, ಚರಂಡಿ, ವಿದ್ಯುಚ್ಛಕ್ತಿ, ನೀರು ಸರಬರಾಜು ಮತ್ತು ಒಳಚರಂಡಿ ಹಾಗೂ ಉದ್ಯಾನವನ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಾದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ, ಕುಶಾಲನಗರ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮೈಸೂರು, ತೋಟಗಾರಿಕೆ ಇಲಾಖೆ ಸೋಮವಾರಪೇಟೆ ಹಾಗೂ ಪುರಸಭೆ, ಕುಶಾಲನಗರ ಇವರುಗಳಿಂದ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರವನ್ನು ಪಡೆದು ಸಲ್ಲಿಸಿರುತ್ತಾರೆ. ಅರ್ಜಿದಾರರು ಸದರಿ ಜಮೀನಿನ ಇತ್ತೀಚಿನ ಆರ್.ಟಿ.ಸಿ, ಮ್ಯುಟೇಷನ್ ಪ್ರತಿ, ಇ.ಸಿ. ಪ್ರತಿ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ಅಂತಿಮ ವಿನ್ಯಾಸ ನಕ್ಷೆಯಲ್ಲಿ ವಸತಿ ಉದ್ದೇಶಕ್ಕೆ 4308.046 ಚ.ಮೀ (ಶೇ.53.22%), ಉದ್ಯಾನವನಕ್ಕಾಗಿ 812.080 ಚ.ಮೀ (ಶೇ.10.03%), ನಾಗರೀಕ ಸೌಲಭ್ಯಕ್ಕಾಗಿ 405.165 ಚ.ಮೀ (ಶೇ.5.00%), ಮತ್ತು ರಸ್ತೆಗಾಗಿ 2568.379 ಚ.ಮೀ (ಶೇ.31.75%) ವಿಸ್ತೀರ್ಣದ ಜಮೀನನ್ನು ಕಾಯ್ದಿರಿಸಲಾಗಿದೆ. ಸದರಿ ವಿನ್ಯಾಸ ನಕ್ಷೆಯಲ್ಲಿನ ರಸ್ತೆ ಮತ್ತು ಉದ್ಯಾನವನಕ್ಕೆ ಕಾಯ್ದಿರಿಸಿದ ಜಮೀನನ್ನು ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಜಮೀನನ್ನು ಯೋಜನಾ ಪ್ರಾಧಿಕಾರಕ್ಕೆ ಪರಿತ್ಯಾಜನ ಪತ್ರದ ಮುಖೇನ ಹಸ್ತಾಂತರಿಸಿದ ನಂತರ ಅಂತಿಮ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದಾಗಿದೆ ಹಾಗೂ ಶೇ. 100 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬಹುದಾಗಿದೆ. ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

ನಿರ್ಣಯ: ಪ್ರಸ್ತಾವನೆಗೆ ಸಂಬಂಧಿಸಿದಂತೆ, ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಸದರಿ ವಿನ್ಯಾಸ ನಕ್ಷೆಯನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿರುವುದರಿಂದ ಹಾಗೂ ಕಾಮಾಗಾರಿ ಪೂರ್ಣಗೊಂಡಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ಮುಕ್ತಾಯ ದೃಢೀಕರಣ ಪತ್ರ ಪಡೆದು ಸಲ್ಲಿಸಿರುವುದರಿಂದ, ರಸ್ತೆ ಮತ್ತು ಉದ್ಯಾನವನಕ್ಕೆ ಕಾಯ್ದಿರಿಸಿದ ಜಮೀನನ್ನು ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಜಮೀನನ್ನು ಯೋಜನಾ ಪ್ರಾಧಿಕಾರಕ್ಕೆ ಪರಿತ್ಯಾಜನ ಪತ್ರದ ಮುಖೇನ ಹಸ್ತಾಂತರಿಸಿದ ನಂತರ ಸದರಿ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಬಹುದೆಂದು ಹಾಗೂ ಶೇ.100% ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯಸಂಖ್ಯೆ(07): ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿರುವ ಪ್ರಸ್ತಾವನೆಗಳು:–

ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಲ್ಲಿ **"0.20 ಸೆಂಟ್ಸ್ ವರೆಗಿನ ವಿಸ್ತೀರ್ಣಕ್ಕೆ ಏಕ–ನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಸ್ವೀಕೃತವಾಗುವ ಪ್ರಸ್ತಾವನೆಗಳಿಗೆ ಮತ್ತು ನಿವೇಶನಗಳ ವಿಭಜನೆ/ಒಟ್ಟುಗೂಡಿಸುವಿಕೆಗೆ ಸಂಬಂಧಿಸಿದ ಕಡತಗಳನ್ನು ಪ್ರಾಧಿಕಾರದ ಅಧ್ಯಕ್ಷರಿಗೆ ಮಂಡಿಸಿ, ಕಡತದಲ್ಲಿ ಅನುಮೋದನೆ ಪಡೆದ ನಂತರ ಸದಸ್ಯ ಕಾರ್ಯದರ್ಶಿಗಳ ಹಂತದಲ್ಲಿ ಅನುಮೋದನೆ ನೀಡುವಂತೆ ಹಾಗೂ ಇಂತಹ ಪ್ರಕರಣಗಳನ್ನು ಮುಂದಿನ ಪ್ರಾಧಿಕಾರದ ಸಭೆಗೆ ಸ್ಥಿರೀಕರಣಕ್ಕಾಗಿ ಮಂಡಿಸಲು ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಗಿರುತ್ತದೆ"**. ಅದರಂತೆ ಈ ಕೆಳಕಂಡ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕೆ ಮಂಡಿಸಿದೆ.

i. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಕೂಡ್ಲೂರು ಗ್ರಾಮದ ಸ.ನಂ. 43/80 ರಲ್ಲಿ 0.05 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:– ಶ್ರೀಮತಿ ಪ್ರೇಮ**).

ಟಿಪ್ಪಣಿ: ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಪತ್ರ ಸಂ: 483856 ದಿನಾಂಕ: 15–06–2023 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಪ್ರಸ್ತಾವಿತ ಜಮೀನು ಪೂರ್ವ ದಿಕ್ಕಿನಲ್ಲಿ 6.0ಮೀ ಅಗಲದ ರಸ್ತೆಗೆ ಲಗತ್ತಾಗಿದ್ದು, ಮಹಾಯೋಜನೆಯಂತೆ 12.0ಮೀ ಅಗಲಕ್ಕೆ ವಿಸ್ತರಿಸಲು ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾವಿಸಲಾಗಿದೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಇತ್ತೀಚಿನ ಇ.ಸಿ. ಪ್ರತಿ, ಇತ್ತೀಚಿನ ಆರ್.ಟಿ.ಸಿ, ಅಲಿನೇಷನ್ ನಕ್ಷೆ, ಕ್ರಯಪತ್ರ, ಆಧಾರ್‌ಕಾರ್ಡ್, ಆಕಾರ್ ಬಂದ್(ಉತಾರು), ಮ್ಯುಟೇಷನ್ ರಿಜಿಸ್ಟರ್, ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ

ಏಕ–ನಿವೇಶನ ನಕ್ಷೆ ಅನುಮೋದನೆ: ಪ್ರಶ್ನಿತ ಜಮೀನಿನ ಸ್ಥಳಪರಿಶೀಲನೆ ನಡೆಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಉಪಯೋಗಕ್ಕಾಗಿ 165.86 ಚ.ಮೀ (ಶೇ. 82.21%) ಮತ್ತು ರಸ್ತೆ ವಿಸ್ತರಣೆಗಾಗಿ 35.89 ಚ.ಮೀ (ಶೇ. 17.79%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ

ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಕೂಡ್ಲೂರು ಗ್ರಾಮದ ಸ.ನಂ. 43/80 ರಲ್ಲಿ 0.05 ಎಕರೆ ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ:12–10–2023 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ii. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 50/4 ರಲ್ಲಿ 0.2.50 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:– ಅಧ್ಯಕ್ಷರು, ನಾಡಪ್ರಭು ಪತ್ತಿನ ಸಹಕಾರ ಸಂಘ**).

ಟಿಪ್ಪಣಿ: ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಪತ್ರ ಸಂ: 417085 ದಿನಾಂಕ: 09–03–2023 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಪ್ರಸ್ತಾವಿತ ಜಮೀನು ಪೂರ್ವ ದಿಕ್ಕಿನಲ್ಲಿ 7.50ಮೀ ಅಗಲದ ರಸ್ತೆಗೆ ಲಗತ್ತಾಗಿದ್ದು, 9.0ಮೀ ಅಗಲಕ್ಕೆ ವಿಸ್ತರಿಸಲು ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾವಿಸಲಾಗಿದೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಉತ್ತಾರು ನಕ್ಷೆ, ಆಕಾರ್ ಬಂದ್(ಉತಾರು), ಮ್ಯುಟೇಷನ್ ರಿಜಿಸ್ಟರ್, 11ಇ ನಕ್ಷೆ, ಇತ್ತೀಚಿನ ಆರ್.ಟಿ.ಸಿ, ಇತ್ತೀಚಿನ ಇ.ಸಿ. ಪ್ರತಿ, ಕ್ರಯಪತ್ರ/ದಾನಪತ್ರ, ಗ್ರಾಮನಕ್ಷೆ, ಆಧಾರ್‌ಕಾರ್ಡ್ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ಏಕ–ನಿವೇಶನ ನಕ್ಷೆ ಅನುಮೋದನೆ: ಪ್ರಶ್ನಿತ ಜಮೀನಿನ ಸ್ಥಳಪರಿಶೀಲನೆ ನಡೆಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಉಪಯೋಗಕ್ಕಾಗಿ 94.32 ಚ.ಮೀ (ಶೇ. 93.72%) ಮತ್ತು ರಸ್ತೆ ವಿಸ್ತರಣೆಗಾಗಿ 6.32 ಚ.ಮೀ (ಶೇ. 6.28%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಮುಳ್ಳುಸೋಗೆ ಗ್ರಾಮದ ಸ.ನಂ. 50/4 ರಲ್ಲಿ 0.02.50 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ:27–10–2023 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

iii. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 85/6 ರಲ್ಲಿ 0.13.50 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:– ಶ್ರೀಮತಿ ಜಿ.ಟಿ. ಭಾಗ್ಯ**).

ಟಿಪ್ಪಣಿ: ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಇವರ ಅಧಿಕೃತ ಜ್ಞಾಪನ ಪತ್ರ ಸಂ: 438643 ದಿನಾಂಕ: 13–07–2023 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಪ್ರಸ್ತಾವಿತ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ ಸಂಪರ್ಕ ಕಲ್ಪಿಸುವ ಹಾಲಿ ರಸ್ತೆಯನ್ನು 9.0ಮೀ ಅಗಲಕ್ಕೆ ವಿಸ್ತರಿಸಲು ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾವಿಸಲಾಗಿದೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಇತ್ತೀಚಿನ ಆರ್.ಟಿ.ಸಿ, ಇತ್ತೀಚಿನ ಇ.ಸಿ. ಪ್ರತಿ, ಮ್ಯುಟೇಷನ್ ರಿಜಿಸ್ಟರ್, ಉತ್ತಾರು ನಕ್ಷೆ, ಆಕಾರ್ ಬಂದ್(ಉತಾರು), ಅಲಿನೇಷನ್ ನಕ್ಷೆ, ಸ್ಥಿರಾಸ್ತಿಯ ವಿಭಾಗ ಪತ್ರ, ಆಧಾರ್‌ಕಾರ್ಡ್, ಗ್ರಾಮನಕ್ಷೆ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ಏಕ–ನಿವೇಶನ ನಕ್ಷೆ ಅನುಮೋದನೆ: ಪ್ರಶ್ನಿತ ಜಮೀನಿನ ಸ್ಥಳಪರಿಶೀಲನೆ ನಡೆಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಉಪಯೋಗಕ್ಕಾಗಿ 488.96 ಚ.ಮೀ (ಶೇ. 89.49%) ಮತ್ತು ರಸ್ತೆ ವಿಸ್ತರಣೆಗಾಗಿ 57.37 ಚ.ಮೀ (ಶೇ. 10.51%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಗುಮ್ಮನಕೊಲ್ಲಿ ಗ್ರಾಮದ ಸ.ನಂ. 85/6 ರಲ್ಲಿ 0.13.50 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ:02–11–2023 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

iv. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 85/7 ರಲ್ಲಿ 0.20 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:– ಜಿ.ಟಿ. ಲೋಕೇಶ್**).

ಟಿಪ್ಪಣಿ: ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಇವರ ಅಧಿಕೃತ ಜ್ಞಾಪನ ಪತ್ರ ಸಂ: 472380 ದಿನಾಂಕ: 14–07–2023 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಪ್ರಸ್ತಾವಿತ ಜಮೀನಿನು ಪೂರ್ವ ದಿಕ್ಕಿನಲ್ಲಿ ರಾಜ್ಯ ಹೆದ್ದಾರಿ–91ಕ್ಕೆ ಲಗತ್ತಾಗಿದ್ದು, ಮಹಾಯೋಜನೆಯಂತೆ 30.0ಮೀ ಅಗಲಕ್ಕೆ ವಿಸ್ತರಿಸಲು ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾವಿಸಲಾಗಿದೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಉತ್ತಾರು ನಕ್ಷೆ, ಆಕಾರ್ ಬಂದ್(ಉತಾರು), ಮ್ಯುಟೇಷನ್ ರಿಜಿಸ್ಟರ್, ಅಲಿನೇಷನ್ ನಕ್ಷೆ, ಇತ್ತೀಚಿನ ಆರ್.ಟಿ.ಸಿ, ಇತ್ತೀಚಿನ ಇ.ಸಿ. ಪ್ರತಿ, ಸ್ಥಿರಾಸ್ತಿಯ ವಿಭಾಗ ಪತ್ರ, ಗ್ರಾಮನಕ್ಷೆ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ಏಕ–ನಿವೇಶನ ನಕ್ಷೆ ಅನುಮೋದನೆ: ಪ್ರಶ್ನಿತ ಜಮೀನಿನ ಸ್ಥಳಪರಿಶೀಲನೆ ನಡೆಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ

ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಉಪಯೋಗಕ್ಕಾಗಿ 692.94 ಚ.ಮೀ (ಶೇ. 85.54%) ಮತ್ತು ರಸ್ತೆ ವಿಸ್ತರಣೆಗಾಗಿ 117.09 ಚ.ಮೀ (ಶೇ. 14.46%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಗುಮ್ಮನಕೊಲ್ಲಿ ಗ್ರಾಮದ ಸ.ನಂ. 85/7 ರಲ್ಲಿ 0.20 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ:02–11–2023 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

v. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 26/8 ರಲ್ಲಿ 0.08 ಎಕರೆ ಮತ್ತು ಸ.ನಂ. 26/11 ರಲ್ಲಿ 0.05 ಎಕರೆ ಒಟ್ಟು 0.13 ಎಕರೆ ವಿಸ್ತೀರ್ಣದ ಜಮೀನಿನ ವಾಣಿಜ್ಯ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:– ಜಿ.ಟಿ. ಗೋವಿಂದರಾಜು**).

ಟಿಪ್ಪಣಿ: ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಇವರ ಅಧಿಕೃತ ಜ್ಞಾಪನ ಪತ್ರಗಳ ಸಂಖ್ಯೆ: 409232 ದಿನಾಂಕ:14–07–2023 ಮತ್ತು 480219 ದಿನಾಂಕ:18–08–2023ರಲ್ಲಿ ವಾಣಿಜ್ಯ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಾಣಿಜ್ಯ ವಲಯದಲ್ಲಿದೆ.

ರಸ್ತೆ ಸಂಪರ್ಕ: ಪ್ರಸ್ತಾವಿತ ಜಮೀನಿನು ಪೂರ್ವ ದಿಕ್ಕಿನಲ್ಲಿ ರಾಜ್ಯ ಹೆದ್ದಾರಿ–91ಕ್ಕೆ ಲಗತ್ತಾಗಿದ್ದು, ಮಹಾಯೋಜನೆಯಂತೆ 30.0ಮೀ ಅಗಲಕ್ಕೆ ವಿಸ್ತರಿಸಲು ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾವಿಸಲಾಗಿದೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಉತ್ತಾರು ನಕ್ಷೆ, ಆಕಾರ್ ಬಂದ್(ಉತಾರು), ಮ್ಯುಟೇಷನ್ ಪ್ರತಿ, ಅಲಿನೇಷನ್ ನಕ್ಷೆ, ಆರ್.ಟಿ.ಸಿ, ಇ.ಸಿ. ಪ್ರತಿ, ಕ್ರಯಪತ್ರ ಹಾಗೂ ಕುಟುಂಬದ ಬಾಬ್ತು ಸ್ಥಿರ ಹಾಗೂ ಚರಾಸ್ತಿಯ ವಿಭಾಗ ಪತ್ರ, ಗ್ರಾಮನಕ್ಷೆ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ಏಕ–ನಿವೇಶನ ನಕ್ಷೆ ಅನುಮೋದನೆ: ಪ್ರಶ್ನಿತ ಜಮೀನಿನ ಸ್ಥಳಪರಿಶೀಲನೆ ನಡೆಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಾಣಿಜ್ಯ ಉಪಯೋಗಕ್ಕಾಗಿ 381.28 ಚ.ಮೀ (ಶೇ. 72.52%), ವಾಹನನಿಲುಗಡೆಗಾಗಿ 26.29 ಚ.ಮೀ (ಶೇ. 5.00%) ಮತ್ತು ರಸ್ತೆ ವಿಸ್ತರಣೆಗಾಗಿ 65.51 ಚ.ಮೀ (ಶೇ. 12.47%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಗುಮ್ಮನಕೊಲ್ಲಿ ಗ್ರಾಮದ ಸ.ನಂ. 26/8 ರಲ್ಲಿ 0.08 ಎಕರೆ ಮತ್ತು ಸ.ನಂ. 26/11 ರಲ್ಲಿ 0.05 ಎಕರೆ ಒಟ್ಟು 0.13 ಎಕರೆ ವಿಸ್ತೀರ್ಣದ ಜಮೀನಿನ ವಾಣಿಜ್ಯ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ: 02–11–2023 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ನಿರ್ಣಯ: ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ಮೇಲ್ಕಾಣಿಸಿದ ಏಕ ನಿವೇಶನಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಈಗಾಗಲೇ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡಿರುವುದನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ(08): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಕೂಡ್ಲೂರು ಗ್ರಾಮದ ಸ.ನಂ. 39/1 ರಲ್ಲಿ 0.50 ಎಕರೆ ವಿಸ್ತೀರ್ಣದ ಜಮೀನಿನ ವಾಣಿಜ್ಯ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ **(ಅರ್ಜಿದಾರರು:– ಶ್ರೀಮತಿ ಜವರಮ್ಮ ಕೋಂ ನಿಂಗಪ್ಪ ಕೆ.ಕೆ.)**

ಟಿಪ್ಪಣಿ: ಪ್ರಶ್ನಿತ ಜಮೀನಿನ ವಾಣಿಜ್ಯ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪರಿಶೀಲಿಸಲಾಗಿ, ಸದರಿ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂಪರಿವರ್ತಿಸಲು ಈ ಕಚೇರಿಯಿಂದ ತಾಂತ್ರಿಕ ಅಭಿಪ್ರಾಯವನ್ನು ದಿನಾಂಕ:10–07–2023 ರಂದು ನೀಡಲಾಗಿದೆ.

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 505780 ದಿನಾಂಕ: 30–08–2023 ರಂದು ವಾಣಿಜ್ಯ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಾಣಿಜ್ಯ ವಲಯದಲ್ಲಿದೆ.

ರಸ್ತೆ ಸಂಪರ್ಕ: ಸದರಿ ಜಮೀನು ಉತ್ತರ ದಿಕ್ಕಿನಲ್ಲಿ 18.0ಮೀ ಅಗಲದ ರಾಜ್ಯ ಹೆದ್ದಾರಿ–91ಕ್ಕೆ ಲಗತ್ತಾಗಿದ್ದು, ಅಂತಿಮ ಮಹಾಯೋಜನೆಯಲ್ಲಿ 30.0ಮೀ ಅಗಲಕ್ಕೆ ವಿಸ್ತರಿಸಲು ಪ್ರಸ್ತಾಪಿಸಲಾಗಿದೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಭೂಪರಿವರ್ತನೆ ಆದೇಶದ ಪ್ರತಿ, ವಿಭಾಗಪತ್ರ, ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಉತ್ತಾರು ನಕ್ಷೆ, ಆಕಾರ್ ಬಂದ್(ಉತಾರು), ಇತ್ತೀಚಿನ ಮ್ಯುಟೇಷನ್ ಪ್ರತಿ, ಅಲಿನೇಷನ್ ನಕ್ಷೆ, ಇತ್ತೀಚಿನ ಆರ್.ಟಿ.ಸಿ, ಇತ್ತೀಚಿನ ಇ.ಸಿ. ಪ್ರತಿ, ಅಫಿಡೆವಿಟ್, ಆಧಾರ್‌ಕಾರ್ಡ್ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಸದರಿ ಜಮೀನಿನ ಸ್ಥಳ ಪರಿಶೀಲನೆಯನ್ನು ಮಾಡಲಾಗಿದೆ ಹಾಗೂ ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿದೆ. ಸದರಿ ಜಮೀನು ಉತ್ತರ ದಿಕ್ಕಿನಲ್ಲಿ 18.0ಮೀ ಅಗಲದ ರಾಜ್ಯ ಹೆದ್ದಾರಿ–91ಕ್ಕೆ ಲಗತ್ತಾಗಿದೆ ಹಾಗೂ ಹಾಲಿ ಬೆಳವಣಿಗೆಗೆ ಹೊಂದಿಕೊಂಡಿದೆ. ಅಂತಿಮ ಮಹಾಯೋಜನೆಯನ್ವಯ ರಸ್ತೆಯನ್ನು 30.0ಮೀ ಅಗಲಕ್ಕೆ ವಿಸ್ತರಿಸಲು ಕ್ರಮವಹಿಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಲಾಗಿದೆ.

ವಾಣಿಜ್ಯ ಏಕ–ನಿವೇಶನ ನಕ್ಷೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಭೂಉಪಯೋಗ	ವಿಸ್ತೀರ್ಣ (ಚ.ಮೀ ಗಳಲ್ಲಿ)	ಶೇಕಡ
ವಾಣಿಜ್ಯ ಉಪಯೋಗಕ್ಕಾಗಿ	1089.79	53.86 %
ಉದ್ಯಾನವನ/ಬಫರ್‌ಗಾಗಿ	202.50	10.00 %
ವಾಹನ ನಿಲುಗಡೆಗಾಗಿ	107.53	5.31 %
ರಸ್ತೆ ವಿಸ್ತರಣೆಗಾಗಿ	623.42	30.83 %
ಒಟ್ಟು	**8093.670**	**100.00%**

ಸದರಿ ಜಮೀನಿನ ವಾಣಿಜ್ಯ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಪರಿಗಣಿಸಬಹುದಾಗಿದ್ದು, ವಿಷಯವನ್ನು ಸಭೆಗೆ ಮಂಡಿಸಿದೆ.

ನಿರ್ಣಯ: ಸದರಿ ಜಮೀನು ಅಂತಿಮ ಮಹಾಯೋಜನೆ–2031 ರಂತೆ ವಾಣಿಜ್ಯ ವಲಯದಲ್ಲಿದ್ದು, ರಾಜ್ಯ ಹೆದ್ದಾರಿ–91 ರಿಂದ ಸಂಪರ್ಕ ಹೊಂದಿರುವುದರಿಂದ ಮತ್ತು ಹಾಲಿ ಬೆಳವಣಿಗೆಗೆ ಹೊಂದಿಕೊಂಡಿರುವುದರಿಂದ ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಸದರಿ ಜಮೀನಿನ ವಾಣಿಜ್ಯ ಉದ್ದೇಶದ ಏಕ–ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯಸಂಖ್ಯೆ(9): ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ಹೆಚ್ಚುವರಿ ವಿಷಯಗಳು:

(ಅ): ಯೋಜನಾ ಪ್ರಾಧಿಕಾರದ ಹೆಸರಿನಲ್ಲಿರುವ ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಿಕೆ ಮಾಡಲು ಮತ್ತೊಮ್ಮೆ ಪ್ರಕಟಣೆ ನೀಡುವ ಬಗ್ಗೆ.

ಟಿಪ್ಪಣಿ: ಕುಶಾಲನಗರ ಯೋಜನಾ ಪ್ರಾಧಿಕಾರದ ಹೆಸರಿನಲ್ಲಿರುವ ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಿಕೆ ಮಾಡಲು ಉಪನೋಂದಣಾಧಿಕಾರಿಗಳು ನಿಗದಿಪಡಿಸಿರುವ ಮಾರುಕಟ್ಟೆ ದರದಂತೆ ಗುತ್ತಿಗೆ ಮೊಬಲಗನ್ನು ನಿಗಧಿಪಡಿಸಿ ಸಂಘ ಸಂಸ್ಥೆಯವರಿಗೆ 30 ವರ್ಷಗಳ ಗುತ್ತಿಗೆ (ಲೀಜ್) ಅವಧಿಗೆ ವಿತರಿಸಲು ಸರ್ಕಾರದ ಸುತ್ತೋಲೆಯಂತೆ ಸ್ಥಳೀಯ ಯೋಜನಾ ಪ್ರದೇಶದಲ್ಲಿ ವ್ಯಾಪಕ ಪ್ರಚಾರದಲ್ಲಿರುವ ಕನ್ನಡ (ಶಕ್ತಿ ದಿನಪತ್ರಿಕೆ) ಮತ್ತು ಇಂಗ್ಲೀಷ್ (Deccan Herald) ಎರಡು ಭಾಷೆಯ ದಿನಪತ್ರಿಕೆಗಳಲ್ಲಿ ದಿನಾಂಕ: 25–07–2023 ರಂದು ಪ್ರಕಟಣೆಯನ್ನು ನೀಡಲಾಗಿತ್ತು. ಆದರೆ ಇದುವರೆಗೂ ಯಾವುದೇ ಅರ್ಜಿಯು ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ನಿರ್ಣಯ: ಯೋಜನಾ ಪ್ರಾಧಿಕಾರದ ಹೆಸರಿನಲ್ಲಿರುವ ನಾಗರೀಕ ಸೌಲಭ್ಯ ನಿವೇಶನಗಳನ್ನು ಗುತ್ತಿಗೆ ನೀಡುವ ಸಂಬಂಧ ಇದುವರೆಗೂ ಯಾವುದೇ ಅರ್ಜಿಯು ಪ್ರಾಧಿಕಾರದಲ್ಲಿ ಸ್ವೀಕೃತವಾಗಿಲ್ಲದ ಕಾರಣ ಮಾನ್ಯ ಅಧ್ಯಕ್ಷರು ಪ್ರಕಟಣೆಯನ್ನು ಮತ್ತೊಮ್ಮೆ ಕಛೇರಿಯ ಸೂಚನಾ ಫಲದಲ್ಲಿ ಹಾಗೂ ಕಛೇರಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕೆಂದು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿದರು. ಅದರಂತೆ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಸಹಿ/–	ಸಹಿ/–
ಸದಸ್ಯ ಕಾರ್ಯದರ್ಶಿ	ಅಧ್ಯಕ್ಷರು
ಕುಶಾಲನಗರ ಯೋಜನಾ ಪ್ರಾಧಿಕಾರ	ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ	ಕುಶಾಲನಗರ